ಜನಶ್ರೀ ಟೈಮ್ಸ್
JANASHREE TIMES KANNADA DAILY NEWS PAPER
ಕನ್ನಡ ದಿನಪತ್ರಿಕೆ
PRGI NO : KNKAN/26/A0482
ಸಂಪಾದಕರು: ಆನಂದಯ್ಯ ವಿರಕ್ತಮಠ
ಸಂಪುಟ: 01 ಸಂಚಿಕೆ: 61 ಪುಟಗಳು: 04 ಬೆಲೆ: 02 ರೂ. ದಿನಾಂಕ: 02-09-2026 ಬುಧವಾರ
73536 56555

**ಜನಶ್ರೀವಾಣಿ**

ಜನರಿಂದ ಮತ ಪಡೆದು ಹಿತ ಕಾಯಲಿಲ್ಲ, ಖುರ್ಚಿಗಾಗಿ ಮತದ ಮೌಲ್ಯವನ್ನೇ ಕಳೆವುದೆಂತು ಸರಿ..?

■ ಆನಂದಯ್ಯ ವಿರಕ್ತಮಠ
ಸಂಪಾದಕರು: ಜನಶ್ರೀ ಟೈಮ್ಸ್

# ಶೀಘ್ರವೇ ಬರ ಪೀಡಿತ ತಾಲ್ಲೂಕುಗಳ ಎರಡನೇ ಪಟ್ಟಿ ಪ್ರಕಟ : ಸಿಎಂ ಡಿ ಕೆ ಶಿವಕುಮಾರ್

## ಮಾರ್ಗಸೂಚಿ ಅನುಸಾರವೇ ಘೋಷಣೆ ರೈತರ ಪರಿಸ್ಥಿತಿ ಕಣ್ಣಾರೆ ಕಂಡಿರುವೆ ನಮ್ಮ ವರದಿ ಹಾಗೂ ಕೇಂದ್ರದ ವರದಿ ಹೊಂದಾಣಿಕೆ ಆಗಬೇಕು

**ಜನಶ್ರೀ ಟೈಮ್ಸ್ ಸುದ್ದಿ**

ಗದಗ: "ನಾವು ಮಾರ್ಗಸೂಚಿ ಅನುಸಾರ ಬರ ಪ್ರದೇಶ ಘೋಷಣೆ ಮಾಡಬೇಕು. ಅದರನ್ವಯ ಅಧ್ಯಯನ ಮಾಡಿ ಎರಡನೇ ಪಟ್ಟಿಯನ್ನು ಶೀಘ್ರವೇ ಘೋಷಣೆ ಮಾಡುತ್ತೇವೆ" ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ತಿಳಿಸಿದರು. ಬರ ಪರಿಸ್ಥಿತಿ ಕುರಿತು ಸಿಎಂ ಡಿ ಕೆ ಶಿವಕುಮಾರ್ ಅವರು ಗದಗ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಂಗಳವಾರ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ಬಳಿಕ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದರು.

"ಜಿಲ್ಲಾ ಸಚಿವರು ಪ್ರತಿ ತಾಲ್ಲೂಕಿಗೆ ಭೇಟಿ ನೀಡಿ, ವಾಸ್ತವಾಂಶದ ವರದಿ ನೀಡಿದ್ದಾರೆ. ಅದರ ಜೊತೆಗೆ ಅಧಿಕಾರಿಗಳು ಅಧ್ಯಯನ ಮಾಡುತ್ತಿದ್ದಾರೆ. ಎರಡೂ ವರದಿ ಪರಿಶೀಲಿಸಿ ಕೇಂದ್ರಕ್ಕೆ ವರದಿ ಸಲ್ಲಿಸಬೇಕಿದೆ" ಎಂದು ವಿವರಿಸಿದರು.

"ರೈತರ ಬದುಕು ಅಪಾಯದಲ್ಲಿದೆ. ಜಿಲ್ಲೆಯ ಜನ ಆತಂಕಕ್ಕೆ ಒಳಗಾಗಿದ್ದಾರೆ. 50 ವರ್ಷಗಳಲ್ಲಿ ಭೀಕರ ಬರ ಪರಿಸ್ಥಿತಿಗೆ ಜಿಲ್ಲೆ ಒಳಗಾಗಿದೆ. ಈ ವರ್ಷ ಶೇ. 40 ರಷ್ಟು ಮಳೆ ಕಡಿಮೆಯಾಗಿದೆ. ನಾನು ಹೆಲಿಕಾಪ್ಟರ್ ನಲ್ಲಿ ಬರುವಾಗ ನೋಡಿದೆ. ಹಲವು ಕಡೆ ಬಿತ್ತನೆಯೇ ಆಗಿಲ್ಲ. ಬಿತ್ತನೆ ಆಗಿರುವ ಕಡೆಗಳಲ್ಲಿ 10–15% ಬೆಳೆ ಕೂಡ ರೈತರ ಕೈ ಸೇರುವುದಿಲ್ಲ" ಎಂದರು.



"ರೈತರ ಜಮೀನಿಗೆ ಹೋಗಿ ಹತ್ತಿ, ಕಡಲೆಕಾಯಿ, ಜೋಳ, ಸೂರ್ಯಕಾಂತಿ ಬೆಳೆ ವೀಕ್ಷಣೆ ಮಾಡಿದ್ದೇನೆ. ರೈತರಿಗೆ ಯಾವ ಪ್ರಮಾಣದಲ್ಲಿ ತೊಂದರೆ ಆಗುತ್ತಿದೆ ಎಂದು ಮನವರಿಕೆ ಆಗಿದೆ. ರೈತರೊಂದಿಗೆ ಚರ್ಚೆ ಮಾಡಿದ್ದು, ಅವರ ನೋವು ತಿಳಿಸಿದ್ದಾರೆ. ಜನ ವಲಸೆ ಹೋಗುವುದನ್ನು ತಪ್ಪಿಸಲು ವಿಬಿಜಿ ರಾಮ್ ಜಿ ಯೋಜನೆ ಹೇಗೆ ಸಹಾಯ ಆಗಬೇಕು ಎಂದು ತಿಳಿಸಿದ್ದಾರೆ" ಎಂದರು.

"ಈ ಜಿಲ್ಲೆಯಲ್ಲಿ ಗಜೇಂದ್ರಗಡ ಮಾತ್ರ ಬರ ಪೀಡಿತ ಎಂದು ಘೋಷಣೆ ಮಾಡಲಾಗಿದ್ದು, ಜಿಲ್ಲಾ ಮಂತ್ರಿಗಳ ನೇತೃತ್ವದಲ್ಲಿ ಎಲ್ಲಾ ಶಾಸಕರು, ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಣೆ ಮಾಡಬೇಕು ಎಂದು ಮನವಿ ಸಲ್ಲಿಸಿದ್ದಾರೆ" ಎಂದು ಹೇಳಿದರು.

"ಹೆಚ್ ಕೆ ಪಾಟೀಲ ಅವರು ಮೋಡ ಬಿತ್ತನೆ ವಿಚಾರವಾಗಿ ತಮ್ಮ ಅಭಿಪ್ರಾಯ ಮಂಡಿಸಿದ್ದಾರೆ. ಅದೇ ರೀತಿ ಬೇರೆ ಶಾಸಕರು ಬೇರೆ ಬೇರೆ ವಿಚಾರವಾಗಿ ಗಮನ ಸೆಳೆದಿದ್ದಾರೆ. ನೀರಾವರಿ, ಬೆಣ್ಣೆ ಹಳ್ಳ ಸೇರಿದಂತೆ ಬೇರೆ ಅಭಿವೃದ್ಧಿ ಯೋಜನೆಗಳ ಬಗ್ಗೆ ಚರ್ಚಿಸಿದ್ದಾರೆ. ಆರ್ಥಿಕ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಈ ಯೋಜನೆಗಳ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ" ಎಂದು ತಿಳಿಸಿದರು.

ನಮ್ಮ ವರದಿ ಕೇಂದ್ರದ ವರದಿ ಹೊಂದಾಣಿಕೆ ಆಗಬೇಕು

"ನಮ್ಮ ವರದಿ ಕೇಂದ್ರದ ವರದಿ ಜತೆ ಹೊಂದಾಣಿಕೆ ಆಗಬೇಕು. ದೆಹಲಿಯಿಂದ ಬರುವ ಬರ ಅಧ್ಯಯನ ತಂಡಕ್ಕೆ ನಮ್ಮ ವರದಿ ಒಪ್ಪಿಗೆ ಆಗಬೇಕು. ಆಗ ಮಾತ್ರ ಕೇಂದ್ರ ಸರ್ಕಾರ ನೆರವು ನೀಡಲಿದೆ. ನಾವು ನಮ್ಮ ಕೈಲಾದ ಕ್ರಮ ಕೈಗೊಂಡಿದ್ದೇವೆ. ಕುಡಿಯುವ ನೀರಿನ ಪೂರೈಕೆ ಬಗ್ಗೆ ಸೂಚನೆ ನೀಡಲಾಗಿದೆ. ಕುಡಿಯುವ ನೀರಿಗೆ ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರಕ್ಕೆ 1 ಕೋಟಿ ರೂ. ಅನುದಾನ ನೀಡಲಾಗಿದೆ. ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಹೆಚ್ಚುವರಿ ಹಣ ಇಡಲಾಗಿದೆ" ಎಂದು ವಿವರಿಸಿದರು.

"ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಚುರುಕಾಗಬೇಕು, ಜನ ತಮ್ಮ ಸಮಸ್ಯೆಗಳಿಗೆ ಪರಿಹಾರಕ್ಕಾಗಿ ಅಲೆದಾಡುವುದನ್ನು ತಪ್ಪಿಸಲು ಪ್ರಜಾಸೇವಾ ಆಂದೋಲನ ಸೆ. 5ರಿಂದ ಆರಂಭವಾಗುತ್ತಿದೆ. ಗ್ಯಾರಂಟಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ಸರಿಯಾದ ರೀತಿಯಲ್ಲಿ ತಲುಪಬೇಕು. ದುರ್ಬಳಕೆ ಆಗಬಾರದು. ಅದಕ್ಕಾಗಿ ಮರುಪರಿಶೀಲನೆ ಹಾಗೂ ಪಂಚಾಯಿತಿ ಮಟ್ಟದ ಗ್ಯಾರಂಟಿ ಸಮಿತಿ ರಚಿಸುತ್ತಿದ್ದೇವೆ" ಎಂದರು.

"ನಮ್ಮ ಸರ್ಕಾರ 100 ದಿನಗಳಲ್ಲಿ ಏನೆಲ್ಲಾ ಮಾಡಿದೆ, ಮುಂದೆ ಏನು ಮಾಡಲಿದೆ ಎಂಬ ವಿಚಾರವಾಗಿ ಅಧಿವೇಶನದಲ್ಲಿ ತಿಳಿಸಲು ನಿರ್ಧರಿಸಿದ್ದೆ. ಆದರೆ ಅದಕ್ಕೆ ವಿರೋಧ ಪಕ್ಷದವರು ಅವಕಾಶ ನೀಡಲಿಲ್ಲ. 100 ದಿನಗಳ ಕಾರ್ಯಕ್ರಮ ವೇಳೆ ನಾನು ಈ ವಿಚಾರವನ್ನು ತಿಳಿಸುತ್ತೇನೆ" ಎಂದರು.

## ಗದಗಕ್ಕೆ ಆಗಮಿಸಿದ ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಸ್ವಾಗತ

**ಜನಶ್ರೀ ಟೈಮ್ಸ್ ಸುದ್ದಿ**

ಗದಗ: ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಂಗಳವಾರ ಗದಗ ಜಿಲ್ಲಾಡಳಿತ ಬವನದ ಆವರಣದಲ್ಲಿರುವ ಹೆಲಿಪ್ಯಾಡ್ ಗೆ ಆಗಮಿಸಿದರು.



ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಹೆಲಿಪ್ಯಾಡ್‌ಗೆ ಆಗಮಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರಡ್ಡಿ, ಶಾಸಕ ಡಾ.ಎಚ್.ಕೆ.ಪಾಟೀಲ, ಶಾಸಕ ಸಿ.ಸಿ.ಪಾಟೀಲ, ಡಾ.ಚಂದ್ರು ಲಮಾಣಿ, ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಡಿ ಆರ್ ಪಾಟೀಲ, ವಿನಯ್ ಕುಲಕರ್ಣಿ, ಹೆಸ್ಕಾಂ ಅಧ್ಯಕ್ಷ ಅಜ್ಜಂಪೀರ್ ಖಾದ್ರಿ, ಮಾಜಿ ಶಾಸಕ ಬಿ.ಆರ್.ಯಾವಗಲ್, ರಾಮಣ್ಣ ಲಮಾಣಿ ಸೇರಿದಂತೆಮಿತುನ ಪಾಟೀಲ, ಬಿ.ಬಿ.ಅಸೂಟಿ, ವಾಸಣ್ಣ ಕುರಡಗಿ ಸೇರಿದಂತೆ ಗಣ್ಯರು ಹಾಗೂ ಜನಪ್ರತಿನಿಧಿಗಳು ಸ್ವಾಗತಿಸಿದರು. ಈ ಸಂದರ್ಭದಲ್ಲಿ ಪ್ರಾದೇಶಿಕ ಆಯುಕ್ತರಾದ ಜಾನಕಿ ಎಸ್., ಐಜಿಪಿ ಸಂದೀಪ್ ಪಾಟೀಲ, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮುಕುಲ್ ಜೈನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಿತುನ್ ಎಚ್.ಎನ್., ಡಿಸಿಎಫ್ ಸಂತೋಷ ಕುಮಾರ್, ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಸುರೇಶ್ ನಾಡಗೌಡರ, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್., ಉಪವಿಭಾಗಾಧಿಕಾರಿ ಗಂಗಪ್ಪ ಎಂ. ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಗದಗ ಜಿಲ್ಲಾ ಪ್ರವಾಸದ ಹಿನ್ನೆಲೆಯಲ್ಲಿ ಜಿಲ್ಲಾಡಳಿತದಿಂದ ಅಗತ್ಯ ಪೂರ್ವಸಿದ್ಧತೆ ಹಾಗೂ ಭದ್ರತಾ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿತ್ತು. ಹೆಲಿಪ್ಯಾಡ್‌ನಲ್ಲಿ ಪೊಲೀಸ್ ಇಲಾಖೆಯಿಂದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಗೌರವ ವಂದನೆ ಸಲ್ಲಿಸಲಾಯಿತು.

## ಸಮಾಜದ ಋಣ ತೀರಿಸುವ ಕಾರ್ಯ ಮಾಡೋಣ : ಎಂ.ಎಸ್.ಬಡದಾನಿ

**ಜನಶ್ರೀ ಟೈಮ್ಸ್ ಸುದ್ದಿ**

ಮುದ್ದೇಬಿಹಾಳ: ಹಿಂದುಳಿದ ಸಮಾಜದಲ್ಲಿ ಜನಿಸಿದ್ದರೂ ಶಿಕ್ಷಣದಲ್ಲಿನಮ್ಮವರು ಎಂದಿಗೂ ಹಿಂದೆ ಬಿದ್ದಿಲ್ಲ .ಶಿಕ್ಷಣದೊಂದಿಗೆ ಜನಾಂಗವನ್ನುಆರ್ಥಿಕ ಸಬಲತೆಯತ್ತ ಕೊಂಡೊಯ್ಯುವ ಕಾರ್ಯ ಸಮಾಜದಬಾಂಧವರು ಮಾಡಬೇಕು ಎಂದು ಮುದ್ದೇಬಿಹಾಳ ನೂತನಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಸ್.ಬಡದಾನಿ ಹೇಳಿದರು.

ಪಟ್ಟಣದ ಬನಶಂಕರಿ ದೇವಸ್ಥಾನದಲ್ಲಿ ಭಾನುವಾರ ದೇವಾಂಗ ಸಮಾಜಹಾಗೂ ದೇವಾಂಗ ನೌಕರರ ಸಂಘದ ವತಿಯಿಂದ ಏರ್ಪಡಿಸಿದ್ದಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿಂದುಳಿದವರ್ಗದವರ ನೇಮಕಾತಿ ವಿಭಾಗದಲ್ಲಿ ಕೆಲಸ ಮಾಡಿರುವ ನನಗೆನಮ್ಮ ಜನಾಂಗದವರು ಶೈಕ್ಷಣಿಕವಾಗಿ ಇನ್ನೂ ಪ್ರಗತಿ ಸಾಧಿಸಬೇಕಾಗಿದೆ ಎಂಬ ಅರಿವಿದೆ. ಸಮಾಜದಲ್ಲಿರುವ ಅತ್ಯಂತ ಕಡು ಬಡಪ್ರತಿಭಾವಂತ ಮಕ್ಕಳ ಶೈಕ್ಷಣಿಕ ಮುನ್ನಡೆಗೆ



ತಮ್ಮಿಂದಾದನೆರವು ನೀಡುವುದಾಗಿ ಹೇಳಿದರು.

ದೇವಾಂಗ ನೌಕರರ ಸಂಘದ ಅಧ್ಯಕ್ಷ ಶ್ರೀಶೈಲ ಭಾವಿಕಟ್ಟಿ ಮಾತನಾಡಿ, ಅತ್ಯಂತ ಸರಳ ಸಜ್ಜನಿಕೆಯ ವ್ಯಕ್ತಿ ಬಡದಾನಿಅವರಾಗಿದ್ದು ಸಾಕಷ್ಟು ಕಷ್ಟಕೋಟಲೆಗಳನ್ನು ಎದುರಿಸಿ ಇಂದುಮುದ್ದೇಬಿಹಾಳದ ಬಿಇಒ ಆಗಿ ಸೇವೆಗೆ ಬಂದಿರುವುದು ನಮಗೆಲ್ಲರಿಗೂ ಹೆಮ್ಮೆ ತರುವ ಸಂಗತಿಯಾಗಿದೆ.ಸಮಾಜದವ ರಕ್ಕಳ ಶೈಕ್ಷಣಿಕ ಪ್ರಗತಿಗೆ ನಾವೆಲ್ಲರೂ ಶಕ್ತಿಮೀರಿ ಪ್ರಯತ್ನಿಸುತ್ತೇವೆ ಎಂದು ಹೇಳಿದರು.

ಬನಶಂಕರಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಶಂಕರ ಈ.ಹೆಬ್ಬಾಳ ಮಾತನಾಡಿ, ಮುದ್ದೇಬಿಹಾಳ ಕ್ಷೇತ್ರ ಶಿಕ್ಷಣಾಧಿಕಾರಿ ಹುದ್ದೆ ಅತ್ಯಂತ ಜವಾಬ್ದಾರಿಯಾಗಿದೆ. ಎಲ್ಲ ಜಾತಿ ಜನಾಂಗದವರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಕೆಲಸ ಮಾಡುವ ಶಿಕ್ಷಕರಿಗೆ ಪ್ರೋತ್ಸಾಹ, ಕೆಲಸ ಮಾಡದ ಶಿಕ್ಷಕರಿಗೆ ಕಠಿಣ ಸೂಚನೆಗಳನ್ನು ನೀಡುವ ಮೂಲಕ ಎಲ್ಲರ ಮೆಚ್ಚುಗೆ ಗಳಿಸುವಂತೆ ಸಲಹೆಮಾಡಿದರು.

ದೇವಾಂಗ ಸಮಾಜದ ಅಧ್ಯಕ್ಷರಾದ ಚನ್ನಬಸ್ಸು ಗುಡ್ಡದ, ಮುತ್ತಣ್ಣ ಪ್ಯಾಟಿಗೌಡರ, ಮಾತನಾಡಿದರು. ಸಮಾಜದ ಹಿರಿಯರಾದ ಸಿದ್ದಣ್ಣ ಚಿತ್ತರಗಿ, ಬಸವರಾಜ ಅಗಸಬಾಳ, ಈಶ್ವರಪ್ಪ ಹೆಬ್ಬಾಳ, ದೇವಾಂಗ ನೌಕರರ ಸಂಘದ ಸದಸ್ಯರಾದ ಬಿ.ಬಿ.ಕಲ್ಲುಂಡಿ, ಸಿ.ಎಚ್.ಚಿತ್ತರಗಿ, ಎನ್.ಎಸ್.ಚಿತ್ತರಗಿ, ಅನೀಲ್ ಬೇನಾಳ, ಸಂತೋಷ ಹೆಬ್ಬಾಳ, ವೀರೇಶ ಮಾಶೆಟ್ಟಿ, ರುಕ್ಮಿಣಿ ಶೇಬಿನಕಟ್ಟಿ, ಸುನಂದಾ ಗುಡ್ಡದ, ರಾಘು ಬೇಲಾಳ, ಸುರೇಶ ಮಾಶ್ಯಾಳ, ಐ.ಎಸ್.ಮೋರ್ಖೆ, ಮಹಾಂತೇಶ ಮೋರ್ಖೆ, ವಿಜಯಲಕ್ಷ್ಮಿ ಬಡದಾನಿ, ಶಿಕ್ಷಕಿ ಪ್ಯಾಟಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು. ಅಮೃತಾ ಹೆಬ್ಬಾಳ ಹಾಗೂ ಅರ್ಪಿತಾ ಹೆಬ್ಬಾಳ ಸ್ವಾಗತ ಗೀತೆ ಹಾಡಿದರು. ಕಸ್ತೂರಿ ಗದೆಪ್ಪನವರ ಪ್ರಾರ್ಥಿಸಿದರು. ಸಂತೋಷ ಚಿತ್ತರಗಿ ನಿರೂಪಿಸಿದರು. ಸಿಆರ್‌ಪಿ ಸರಸ್ವತಿ ವಡವಡಗಿ(ಹುಣಶ್ಯಾಳ) ವಂದಿಸಿದರು.

**ಶೀಘ್ರ ಪ್ರತಿಭಾ ಪುರಸ್ಕಾರ ಆಯೋಜನೆ:**

ದೇವಾಂಗ ಸಮಾಜದ ಪ್ರತಿಭಾವಂತ ಮಕ್ಕಳನ್ನು ಸನ್ಮಾನಿಸುವ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಸೆಪ್ಟೆಂಬರ್ ತಿಂಗಳಲ್ಲಿ ಆಯೋಜಿಸುವುದಕ್ಕೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತದೆ ಎಂದು ದೇವಾಂಗನೌಕರರ ಸಂಘದ ಅಧ್ಯಕ್ಷ ಶ್ರೀಶೈಲ ಭಾವಿಕಟ್ಟಿ ತಿಳಿಸಿದರು.

## ಪರಿಶೀಲನೆ ನಡೆಸಿ ಕೇಂದ್ರದ ಮಾರ್ಗಸೂಚಿ ಅನುಸಾರ ಬರ ತಾಲ್ಲೂಕು ಘೋಷಣೆ : ಸಿಎಂ ಡಿ ಕೆ ಶಿವಕುಮಾರ್ ಸೂರ್ಯಕಾಂತಿ, ಜೋಳ, ಹತ್ತಿ, ಕಡಲೆಕಾಯಿ ಬೆಳೆ ವೀಕ್ಷಿಸಿದ ಸಿಎಂ

**ಜನಶ್ರೀ ಟೈಮ್ಸ್ ಸುದ್ದಿ**

ಗದಗ:"ಪರಿಶೀಲನೆ ನಡೆಸಿ ಕೇಂದ್ರದ ಮಾರ್ಗಸೂಚಿ ಅನುಸಾರ ಬರ ಪೀಡಿತ ತಾಲ್ಲೂಕು ಘೋಷಣೆ ಮಾಡಲಾಗುವುದು" ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ರೈತರಿಗೆ ಭರವಸೆ ನೀಡಿದರು.

ಸಿಎಂ ಡಿ ಕೆ ಶಿವಕುಮಾರ್ ಅವರು ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಕದಾಂಪೂರ, ಹುಲಕೋಟಿ, ಕುರ್ತಕೋಟಿ ಗ್ರಾಮಗಳಲ್ಲಿ ರೈತರ ಜಮೀನಿಗೆ ಮಂಗಳವಾರ ಭೇಟಿ ನೀಡಿ ಸ್ಥಳೀಯ ರೈತರೊಂದಿಗೆ ಚರ್ಚೆ ನಡೆಸಿದರು. ಈ ಬಾರಿ ಬರ ಪರಿಸ್ಥಿತಿಯಿಂದ ಬೆಳೆಗಳು ಹಾಳಾಗಿವೆ. ಗದಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಬರದಿಂದ ತತ್ತರಿಸಿವೆ. ಹೀಗಾಗಿ ಬಾಕಿ ಇರುವ ಜಿಲ್ಲೆಯ ಆರು ತಾಲ್ಲೂಕನ್ನು ಬರ ಪೀಡಿತ ಪ್ರದೇಶ ಎಂದು ಘೋಷಣೆ ಮಾಡುವಂತೆ ರೈತರು ಮನವಿ ಮಾಡಿದರು.

ರೈತರ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿಗಳು, "ಬರ ಪರಿಸ್ಥಿತಿ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಮತ್ತಷ್ಟು ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡುತ್ತೇವೆ. ಪರಿಸ್ಥಿತಿ ಅಧ್ಯಯನ ಬಳಿಕ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿ ಬರ ಪೀಡಿತ ತಾಲ್ಲೂಕು ಘೋಷಣೆ ಮಾಡಲಾಗುವುದು" ಎಂದು ಭರವಸೆ ನೀಡಿದರು. ಕುರ್ತಕೋಟಿಯಲ್ಲಿ ರೈತ ಜಿ ಎನ್ ಪಾಟೀಲ ಅವರ ಜಮೀನಿಗೆ ಭೇಟಿ ನೀಡಿ ಅವರ ಜಮೀನಿನ ಬದುಗಳಲ್ಲಿ ನೆಡಲಾಗಿರುವ ತೇಗದ ಮರಗಳನ್ನು ಪರಿಶೀಲಿಸಿ, ಸರ್ಕಾರ ಕೈಗೊಂಡಿರುವ 'ತೇಗದ ಸಿರಿ' ಯೋಜನೆ ಬಗ್ಗೆ ಚರ್ಚೆ ನಡೆಸಿದರು. ಬಳಿಕ ಅಲ್ಲಿಗೆ ಬಂದಿದ್ದ ಕೃಷಿ ಕೂಲಿ ಕಾರ್ಮಿಕರನ್ನು ಭೇಟಿ ಮಾಡಿ ಚರ್ಚಿಸಿದರು. ಈ ವೇಳೆ ಕೂಲಿ ಕಾರ್ಮಿಕರು ನರೇಗಾ ಯೋಜನೆ ಇದ್ದಾಗ ಯೋಜನೆ ಅಡಿಯಲ್ಲಿ ನಾವು ಹೆಚ್ಚು ಕೆಲಸ ಪಡೆಯುತ್ತಿದ್ದೆವು. ಈಗ ವಿಬಿ ಗ್ರಾಮ್ ಜಿ ಯೋಜನೆ ಅಡಿಯಲ್ಲಿ ಹೆಚ್ಚು ಕೆಲಸ ಸಿಗುವಂತೆ ಮಾಡಬೇಕು ಎಂದು ಮನವಿ ಮಾಡಿದರು.

ಗ್ಯಾರಂಟಿ ಯೋಜನೆಗಳು ತಲುಪುತ್ತಿವೆಯೇ!– ಕೃಷಿ ಕಾರ್ಮಿಕರೊಂದಿಗೆ ಸಿಎಂ ಮಾತುಕತೆ



ಗ್ಯಾರಂಟಿ ಯೋಜನೆಗಳು ಸರಿಯಾಗಿ ತಲುಪುತ್ತಿವೆಯೇ ಎಂದು ವಿಚಾರಿಸಿದರು. ಗೃಹಜ್ಯೋತಿ ಯೋಜನೆ ಮರುಪರಿಶೀಲನೆ ಮಾಡಲಾಗಿದೆಯೇ ಎಂದು ವಿಚಾರಿಸಿದರು. ಜೊತೆಗೆ ಗೃಹಲಕ್ಷ್ಮಿ ಯೋಜನೆ ಮರುಪರಿಶೀಲನೆ ಮಾಡಲಾಗುತ್ತಿದ್ದೂ, ನೀವು ನಿಮ್ಮ ದೂರವಾಣಿ ಸಂಖ್ಯೆಯನ್ನೇ ನೀಡಬೇಕು. ಮೂರನೇ ವ್ಯಕ್ತಿ ದೂರವಾಣಿ ಸಂಖ್ಯೆ ನೀಡಿದರೆ ಆಗುವುದಿಲ್ಲ ಎಂದು ಹೇಳಿದರು. ಈ ವೇಳೆ ಗ್ಯಾರಂಟಿ ಯೋಜನೆಗಳು ತಮ್ಮ ಬದುಕಿಗೆ ಹೇಗೆ ನೆರವಾಗಿದೆ ಎಂದು ಕೂಲಿ ಕಾರ್ಮಿಕರು ವಿವರಿಸಿದರು.

ಕೂಲಿ ಕಾರ್ಮಿಕರು ಗ್ಯಾರಂಟಿ ಯೋಜನೆಗಳು ನೆರವಾಗಿದ್ದು, ಪ್ರತಿ ತಿಂಗಳು 10 ಕೆ ಜಿ ಅಕ್ಕಿ ಬರುತ್ತಿದೆ, ಗೃಹಲಕ್ಷ್ಮಿ ಯೋಜನೆ ಹಣ ಬರುತ್ತಿದೆ, ಗೃಹಜ್ಯೋತಿ ಮೂಲಕ ಉಚಿತ ವಿದ್ಯುತ್ ಸಿಗುತ್ತಿದ್ದೂ ಈ ಯೋಜನೆಗಳಿಂದ ನಮಗೆ ಕೂಲಿ ಸಿಗದಿದ್ದಾಗಲೂ ನೆಮ್ಮದಿ ಜೀವನ ನಡೆಸಬಹುದು ಎಂದು ತಿಳಿಸಿದರು.

## ಸಂಸ್ಕೃತಿ–ಪರಂಪರೆ ಉಳಿಸುವಲ್ಲಿ ಉತ್ಸವಗಳ ಪಾತ್ರ ಮಹತ್ವದ್ದು ಭಕ್ತಿ–ಶ್ರದ್ಧೆಯಿಂದ ಜರುಗಿದ 16ನೇ ನೀಲಕಂಠೇಶ್ವರ ಉತ್ಸವ

**ಜನಶ್ರೀ ಟೈಮ್ಸ್ ಸುದ್ದಿ**

ಗಜೇಂದ್ರಗಡ: ಪಟ್ಟಣದ ಸಮಸ್ತ ಕುರುಹಿನಶೆಟ್ಟಿ ಸಮಾಜದ ವತಿಯಿಂದ ಆಯೋಜಿಸಿದ್ದ ನೀಲಕಂಠೇಶ್ವರ ದೇವರ 16ನೇ ಉತ್ಸವವು ಸೋಮವಾರ ಭಕ್ತಿ, ಶ್ರದ್ಧೆ ಹಾಗೂ ಸಂಭ್ರಮದಿಂದ ಜರುಗಿತು.

ಉತ್ಸವದ ಅಂಗವಾಗಿ ನಗರದ ನೀಲಕಂಠೇಶ್ವರ ಮಠದಿಂದ ಭವ್ಯ ಮೆರವಣಿಗೆ ನಡೆಯಿತು. ಮೆರವಣಿಗೆಯು ಕೊಳ್ಳಿಯವರ ವೃತ್ತ, ದುರ್ಗಾ ವೃತ್ತ, ಜೋಡು ರಸ್ತೆ ಮಾರ್ಗವಾಗಿ ಸಾಗಿ ನೀಲಕಂಠೇಶ್ವರ ಸಮುದಾಯ ಭವನ ತಲುಪಿತು. ವಿವಿಧ ವಾದ್ಯಮೇಳಗಳೊಂದಿಗೆ ನಡೆದ ಮೆರವಣಿಗೆಯಲ್ಲಿ ಸಮಾಜದ ಮುಖಂಡರು, ಮಹಿಳೆಯರು, ಯುವಕರು ಸೇರಿದಂತೆ ಸಮಾಜದ ಬಾಂಧವರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಬಳಿಕ ನೀಲಕಂಠೇಶ್ವರ ಸಮುದಾಯ ಭವನದಲ್ಲಿ ವೇದಿಕೆ



ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಡಾ. ಸಿ.ವಿ. ಮಾಳಗಿ ಮಾತನಾಡಿ, ಸಮಾಜದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಗಳನ್ನು ಉಳಿಸಿ, ಮುಂದಿನ ಪೀಳಿಗೆಗೆ ಪರಿಚಯಿಸುವಲ್ಲಿ ಇಂತಹ ಉತ್ಸವಗಳು ಪ್ರಮುಖ.

4ನೇ ಪುಟಕ್ಕೆ....

## ಅಡವೀಂದ್ರಸ್ವಾಮಿ ಮಠದಲ್ಲಿ ಮಾಸಿಕ ಶಿವಾನುಭವ ಇಂದು

**ಜನಶ್ರೀ ಟೈಮ್ಸ್ ಸುದ್ದಿ**

ಗದಗ: ನಗರದ ಮುಳಗುಂದನಾಕಾ ಬಳಿಯ ಶ್ರೀಅಡವೀಂದ್ರಸ್ವಾಮಿ ಮಠದ ಶ್ರೀ ಅನ್ನಪೂರ್ಣೇಶ್ವರಿ ಮಂದಿರದಲ್ಲಿ 351ನೇ ಮಾಸಿಕ ಶಿವಾನುಭವ ಹಾಗೂ ಶ್ರಾವಣ ಸಂಜೆ ಕಾರ್ಯಕ್ರಮ ಆಗಸ್ಟ್ 31 ರಂದು ಸೋಮವಾರ ಸಂಜೆ 6.30 ಗಂಟೆಗೆ ಜರುಗಲಿದೆ.

ಶ್ರೀಅಡವೀಂದ್ರಸ್ವಾಮಿ ಮಠದ ಧರ್ಮದರ್ಶಿಗಳಾದ. ಮಹೇಶ್ವರ ಸ್ವಾಮಿಗಳು ಹೊಸಳ್ಳಿಮಠ ಸಮ್ಮುಖ ವಹಿಸುವರು. ಶಿವಾನುಭವಸಮಿತಿ ಅಧ್ಯಕ್ಷರಾದ ರಾಜೇಂದ್ರ ಗಡಾದ ಅಧ್ಯಕ್ಷತೆ ವಹಿಸುವರು. ಅಷ್ಟಾವರಣಗಳ ಮಹತ್ವ ಕುರಿತು ಡಾ.ಸಿದ್ಧವೀರಯ್ಯ ಶಾಸ್ತ್ರೀಗಳು ಹಿರೇಮಠ ಉಪನ್ಯಾಸ ನೀಡುವರು. ಪರಮಹಂಸ ದ್ರೋಣಾಚಾರ್ಯ ಪ್ರಶಸ್ತಿಪುರಸ್ಕೃತರಾದ ಶಂಕರಜಿ ಸೊರಟೂರ ಹಾಗೂ ನಿವೃತ್ತ ಪ್ರಾಚಾರ್ಯರಾದ ಬಿ.ಬಿ.ಪಾಟೀಲ ಅವರಿಗೆ ಗುರುರಕ್ಷೆ ನೀಡಲಾಗುವುದು. ಅನ್ನಪೂರ್ಣೇಶ್ವರಿ ಕಲಾತಂಡದ ಗೀತಾ ವೀರಣ್ಣ ಹೂಗಾರ ಹಾಗೂ ಸಂಗಡಿಗರು ನೃತ್ಯ ಸಂಗೀತಪ್ರಸ್ತುತ ಪಡಿಸುವರು. ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಶರಣಬಸಪ್ಪ ಗುಡಿಮನಿ, ವೀರಣ್ಣಉಪ್ಪೀನ, ಪ್ರಭುಗೌಡ ಪಾಟೀಲ, ಮಹೇಂದ್ರಕುಮಾರ ಸಂಗನಿ ಪ್ರಸಾದ ಸೇವೆವಹಿಸುವರು. ಗುರಪ್ಪ ನಿಡಗುಂದಿ, ಸಿದ್ದಣ್ಣ ಜವಳಿ ಮತ್ತಿತರರು ಉಪಸ್ಥಿತರಿರುವರು ಶಿವಾನುಭವ ಸಮಿತಿ ಕಾರ್ಯದರ್ಶಿ ಪ್ರಭುಗೌಡ ಪಾಟೀಲ ಕೋರಿದ್ದಾರೆ.

## ಮಂಜುನಾಥ ನಗರದಲ್ಲಿ ಚರಂಡಿ ಮತ್ತು ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ

**ಜನಶ್ರೀ ಟೈಮ್ಸ್ ಸುದ್ದಿ**

ಗದಗ: ಬಡವರೇ ವಾಸಿಸುತ್ತಿರುವ 4ನೇ ವಾರ್ಡನ ಬೆಟಗೇರಿಯ ಮಂಜುನಾಥ ನಗರದಲ್ಲಿನ ಜನತೆಗೆ ಮೂಲಸೌಕರ್ಯಗಳನ್ನು ಕಲ್ಪಿಸುವಿಕೆಯಕಾರ್ಯವನ್ನು ಸರಕಾರ ಪ್ರಾಮಾಣಿಕವಾಗಿ ಮಾಡುತ್ತಿದ್ದು, ಈ ಭಾಗದ ಜನರಅನುಕೂಲಕ್ಕಾಗಿ ಒಂದು ಕೋಟಿ ರೂ. ವೆಚ್ಚದಲ್ಲಿ ಸಿಮೆಂಟ್ ರಸ್ತೆಗಳು ಹಾಗೂರಸ್ತೆಯ ಎರಡೂ ಬದಿಯ ಚರಂಡಿಗಳ ನಿರ್ಮಾಣಕ್ಕೆ ಭೂಮಿಪೂಜೆನೆರವೇ–ರಿಸಲಾಗಿದೆ ಎಂದು ಹಿರಿಯ ಶಾಸಕರಾದ ಎಚ್.ಕೆ. ಪಾಟೀಲ ಹೇಳಿದರು.

ಬೆಟಗೇರಿ 4ನೇ ವಾರ್ಡನ ಮಂಜುನಾಥ ನಗರದಲ್ಲಿ ಲೆಕ್ಕ ಶೀರ್ಷಿಕೆ 8443ನೇವಣಿ ವಂತಿ–ಕೆ 2025–26ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯಅಭಿವೃದ್ಧಿ ಯೋಜನೆ ಅಡಿಯಲ್ಲಿ ಒಂದು ಕೋಟಿ ರೂ. ವೆಚ್ಚದಲ್ಲಿ ಚರಂಡಿ ಮತ್ತುರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಗದಗ–ಬೆಟಗೇರಿ ನಗರಸಭೆಯ 4ನೇ ವಾರ್ಡನ ಸದಸ್ಯರಾದ ಶಕುಂತಲಾ ಅಕ್ಕಿ ಅವರು ಬಡವ–ರಿಗೆ ಮೂಲ ಸೌಕರ್ಯ ಕಲ್ಪಿಸಲುನಗರಸಭೆಯಿಂದ ಹೆಚ್ಚುವರಿಯಾಗಿ 27 ಲಕ್ಷ ರೂ. ವೆಚ್ಚದಡಿ ಹಲವು ಅಭಿವೃದ್ಧಿಕಾರ್ಯಗಳನ್ನು ನೆರವೇರಿಸಲು ಮುಂದಾಗಿರುವುದು ಅವರಿಗೆ ತಮ್ಮ ವಾರ್ಡನಜನರ



ಮೇಲಿರುವ ಕಾಳಜಿಗೆ ಸಾಕ್ಷಿಯಾಗಿದೆ. ವಾರ್ಡನ ಹಲವೆಡೆ ಬೋರವೆಲ್ ಕೊರೆಸಿ ಜನರಿಗೆ ಸಮರ್ಪಕ ನೀರಿನ ಸೌಲಭ್ಯವನ್ನು ಕಲ್ಪಿಸಿರುವುದು, ಹಲವು ರಸ್ತೆಗಳನ್ನು ನಿರ್ಮಿಸಿರುವುದು ಸ್ತುತ್ಯಾರ್ಹವಾಗಿದೆ ಎಂದು ಶಾಸಕ ಎಚ್.ಕೆ.ಪಾಟೀಲ ಹೇಳಿದರು. ಈ ಭಾಗದ ಜನರ ಮನ ಮೆಚ್ಚುವಂತೆ ಗುಣಮಟ್ಟದ ಕಾಮಗಾರಿಯನ್ನುನಿಗಧಿತ ಅವಧಿಯಲ್ಲಿ ಕೈಗೊಳ್ಳುವಂತೆ ಗುತ್ತಿಗೆದಾರ ಬಸವರಾಜ ಈಶ್ವರಪ್ಪಶಿರಗುಂಪಿ ಅವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ ಶಾಸಕ ಎಚ್.ಕೆ. ಪಾಟೀಲರು,ಮುಂಬರುವ ಜನೇವರಿ ತಿಂಗಳ ಒಂದರಂದು ಈ ಎಲ್ಲ ಕಾಮಗಾ–ರಿಗಳುಉದ್ಘಾಟನೆಗೊಂಡು ಜನರಿಗೆ ಸೌಲಭ್ಯಗಳು ದೊರಕುವಂತಾಗಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಗದಗ–ಬೆಟಗೇರಿ ನಗರಸಭೆಯ 4ನೇ ವಾರ್ಡನಸದಸ್ಯರಾದ ಶ್ರೀಮತಿ ಶಕುಂತಲಾ ಅಕ್ಕಿ ಅವರು ಮಾತನಾಡಿ, ತಮ್ಮನ್ನು ಆಯ್ಕೆಮಾಡಿದ ಜನರನ್ನು, ಅಭಿವೃದ್ಧಿಗೆ ಸಹಕಾರ ನೀಡಿದ ಶಾಸಕರನ್ನು ಸ್ಮರಿಸಿದರು. ವಾರ್ಡನ ಜನತೆಗೆ ಸರಕಾರ ಹಾಗೂ ನಗರಸಭೆಯಿಂದ ಇನ್ನೂ ಹಲವಾರುಕಾರ್ಯಗಳನ್ನು ಕೈಗೊಳ್ಳಲು ಯೋಜಿಸಿರುವುದಾಗಿ ಹೇಳಿದರಲ್ಲದೇ, ಇಲ್ಲಿನಜನರ ಸಹಕಾರ ಮನೋಭಾವವನ್ನು ಶ್ಲಾಘಿಸಿದರು.

ಮಂಜುನಾಥ ನಗರದ ಫಾರೂಕ್ ಮಸೀದೆಯಿಂದ ಗೌರಿಗಣೇಶಶಾಲೆಯವರೆಗೆ ಗುಣಮಟ್ಟದ ಸಿಮೆಂಟ್ ರಸ್ತೆ ಹಾಗೂ ರಸ್ತೆಯ ಎರಡೂಭಾಗದಲ್ಲಿ ಸಿ.ಸಿ. ಚರಂಡಿಗಳ ನಿರ್ಮಾಣ ಸೇರಿದಂತೆ 348 ಮೀಟ–ರ್ ಉದ್ದದ ಐದು ಸಿ.ಸಿ.ರಸ್ತೆಗಳು, 1,137 ಮೀಟ–ರ್ ಉದ್ದದ ಸಿ.ಸಿ. ಚರಂಡಿಗಳು ಸೇರಿದಂತೆ ಹೈಮಾಸ್ಕವಿದ್ಯುತ್ ದೀಪಗಳನ್ನು ನಿರ್ಮಿಸಲಾಗುತ್ತಿದೆ. ಗುಣಮಟ್ಟದ ಕಾಮಗಾರಿಕೈಗೊಳ್ಳುವಲ್ಲಿ ಜನರ ಸಹಕಾರ ಅತ್ಯಂತ ಅಗತ್ಯವಾಗಿದೆ ಎಂದು ನಗರಸಭೆಸದಸ್ಯರಾದ ಶಕುಂತಲಾ ಹೊಳಬಸಪ್ಪ ಅಕ್ಕಿ ಅವರು ಹೇಳಿದರು.

ಮುಖ್ಯ ಅತಿಥಿಗಳಾಗಿ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷಅಶೋಕ ಮಂದಾಲಿ, ಪ್ರಕಾಶ ವೆರ್ಣೇಕರ, ಶಂಕರಸಿಂಗ್ ರಜಪೂತ, ಹೀರಾಲಾಲಸಾಮೇರವಾಡೆ, ಶಿವಯ್ಯ ಶಿವಪ್ಪಯ್ಯಮಠ, ಸೂರಜ್ ಜಮಾದಾರ, ಮಹ್ಮದಶಾಲಗಾರ, ಶೇಡುಸಿಂಗ್ ಜಮಾದಾರ, ಬಸವರಾಜ ಕುಂದಗೋಳ ಪಾಲ್ಗೊಂಡಿದ್ದರು.

ಸಿದ್ದಣ್ಣ ಮ್ಯಾಳಾನವರ ಸ್ವಾಗತಿಸಿದರು. ವಾಸುದೇವ ಹುಣಸಿಮರದ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಹೊಳಬಸಪ್ಪ ಅಕ್ಕಿ, ಸುದೀಪ ಕಣವಿ,ಹುಲ್ಲೇಶ ಬಜಂತ್ರಿ, ನಿಂಗಪ್ಪ ಕರಮುಡಿ ಸೇರಿದಂತೆ ಗಣ್ಯರು, ಈ ಭಾಗದನಾಗರಿಕರು, ಮಹಿಳೆಯರು ಉಪಸ್ಥಿತರಿದ್ದರು.

# ಜನರ ಕುಂದುಕೊರತೆಗೆ ಸ್ಥಳದಲ್ಲಿಯೇ ಪರಿಹಾರ ಒದಗಿಸುವುದೇ ಪ್ರಜಾಸೇವಾ

ಹೊಸಪೇಟೆ: ಸಾರ್ವಜನಿಕರು ಈ ಹಿಂದೆ ಸರ್ಕಾರದ ಸೇವೆಗಳನ್ನು ಪಡೆಯಲು ಸಾಧ್ಯವಾಗದೇ ಇದ್ದಾಗ ಅಥ-'ವಾ ಯೋಜನೆಯ ಪ್ರಯೋಜನಗಳು ತಲುಪದೇ ಇದ್ದ ಸಂದರ್ಭದಲ್ಲಿ ಕುಂದುಕೊರತೆಯನ್ನು ಅಧಿಕಾರಿಗಳ, ಜನಪ್ರತಿನಿಧಿಗಳ ಬಳಿ ಹೇಳಿಕೊಂಡು ಅದಕ್ಕೆ ಪರಿಹಾರ ಕಂಡುಕೊಳ್ಳುವುದಕ್ಕೆ ಹರ ಸಾಹಸ ಪಡಬೇಕಾದ ಪರಿಸ್ಥಿತಿ ಇತ್ತು.

ಆದರೆ ಈಗ ಹಾಗಿಲ್ಲ. ಕ್ಷಣಾರ್ಧದಲ್ಲಿ ಯಾವುದೇ ರೀತಿಯ ಕುಂದುಕೊರತೆಗಳನ್ನು ಸರ್ಕಾರದ ಬಳಿ ಹೇಳಿಕೊಳ್ಳಬಹುದು. ಸರ್ಕಾರದ ಪ್ರಜಾಸೇವಾ ಅಭಿಯಾನ ಎನ್ನುವುದು ಸಾರ್ವಜನಿಕರ ಕುಂದುಕೊರತೆಗಳನ್ನು ನೇರವಾಗಿ ಆಲಿಸಿ, ಸ್ಥಳದಲ್ಲೇ ಅಥವಾ ನಿರ್ದಿಷ್ಟ ಅವಧಿಯಲ್ಲಿ ಪರಿಹಾರ ಒದಗಿಸುವ ಏಕೀಕೃತ ವ್ಯವಸ್ಥೆಯಾಗಲಿದೆ. ಸೆಪ್ಟೆಂಬರ್ 5 ರಂದು ಈ ಅಭಿಯಾನ ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಿಂದ ಅಧಿಕೃತವಾಗಿ ಪ್ರಾರಂಭವಾಗಲಿದೆ. ಸಾರ್ವಜನಿಕರು ತಮ್ಮ ಸಣ್ಣಪುಟ್ಟ ಸಮಸ್ಯೆಗಳಿಗಾಗಿ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸುವುದು. ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಿ ಕಾಲಮಿತಿಯಲ್ಲಿ ವಿಲೇವಾರಿ ಮಾಡುವುದು. ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಹೆಚ್ಚಿಸುವುದು ಪ್ರಜಾ ಸೇವಾ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ.

ಜನರ ಮನೆ ಬಾಗಿಲಿಗೆ ಆಡಳಿತ ವ್ಯವಸ್ಥೆಯನ್ನು ಕಲ್ಪಿಸುವುದು ಹೊಸದಾಗಿ ರಚಿಸಿದ ಪ್ರಜಾಸೇವಾ ಇಲಾಖೆಯ ಉದ್ದೇಶವಾಗಿದೆ. ಪ್ರತಿ ಶನಿವಾರ ತಾಲ್ಲೂಕು, ಹೋಬಳಿ ಮಟ್ಟದ ಪ್ರಜಾಸೇವಾ ಅಭಿಯಾನ ಸಭೆಗಳನ್ನು ಪರ್ಯಾಯವಾಗಿ ರಾಜ್ಯಾದ್ಯಂತ ನಡೆಸಲು ಕ್ರಮವಹಿಸಲಾಗಿದ್ದು, ಅದರಂತೆ ಪ್ರತಿ ತಿಂಗಳ ಮೊದಲ ಮತ್ತು ಮೂರನೇ ಶನಿವಾರದಂದು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಕೇಂದ್ರದಲ್ಲಿ ಸಭೆ ನಡೆಯುತ್ತದೆ. ಎರಡನೇ ಮತ್ತು ನಾಲ್ಕನೇ ಶನಿವಾರದಂದು ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಅಥವಾ ಹೋಬಳಿ ಮಟ್ಟದಲ್ಲಿ ಸಭೆಯನ್ನು ಆಯೋಜಿಸಲಾಗುವುದು. 3-4 ತಿಂಗಳಲ್ಲಿ ಎಲ್ಲಾ ತಾಲ್ಲೂಕು, ಹೋಬಳಿ ಮಟ್ಟದ ಸಭೆಗಳನ್ನು ಏರ್ಪಡಿಸಲು ಏಕೀಕೃತ Calendar of events ಅನ್ನು ತಯಾರು ಮಾಡಲಾಗಿರುತ್ತದೆ.

ಯಾವುದೇ ಕ್ಷೇತ್ರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಸಭೆ ನಡೆಯುವ ಸಂದರ್ಭದಲ್ಲಿ ಅದೇ ದಿನ ಆ ಕ್ಷೇತ್ರದಲ್ಲಿ ಪ್ರತ್ಯೇಕ ಹೋಬಳಿ ಮಟ್ಟದ ಶಾಸಕರ ಸಭೆಯನ್ನು ನಡೆಸಲಾಗುವುದಿಲ್ಲ. ಬದಲಾಗಿ, ಸಂಬಂಧಿಸಿದ ಶಾಸಕರು ಜಿಲ್ಲಾ ಉಸ್ತುವಾರಿ ಸಚಿವರ ಸಭೆಯಲ್ಲಿ ಭಾಗವಹಿಸುತ್ತಾರೆ. ಜಿಲ್ಲಾ ಮಟ್ಟದ ಅಧಿಕಾರಿಗಳು ಜಿಲ್ಲಾ ಉಸ್ತುವಾರಿ ಸಚಿವರ ಸಭೆಗಳಿಗೆ ಸಂಬಂಧಿಸಿದ ತಾಲ್ಲೂಕು ಅಧಿಕಾರಿಗಳೊಂದಿಗೆ ಹಾಜರಾಗುತ್ತಾರೆ. ಅದೇ ರೀತಿ ತಾಲ್ಲೂಕು ಮಟ್ಟದ ಅಧಿಕಾರಿಗಳು ತಮ್ಮ ತಾಲ್ಲೂಕಿಗೆ ಒಳಪಡುವ ಕ್ಷೇತ್ರದಲ್ಲಿ ನಡೆಯುವ ಶಾಸಕರ ಸಭೆಗಳಲ್ಲಿ ಭಾಗವಹಿಸುತ್ತಾರೆ. ಈ ಎಲ್ಲಾ ಸಭೆಗಳಲ್ಲಿ ಸ್ಥಳೀಯ ಮಾಜಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಅಥವಾ ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರು ಹಾಗೂ ಮುಖಂಡ-ರಿಗೂ ಆಹ್ವಾನಿಸಲಾಗುತ್ತದೆ.

ಸಾರ್ವಜನಿಕರಿಗೆ ಮುಂಗಡ ಮಾಹಿತಿ ಹಾಗೂ ಅರ್ಜಿ ಸಲ್ಲಿಕೆ ವ್ಯವಸ್ಥೆ:

ಪ್ರಜಾಸೇವಾ ಅಭಿಯಾನದಡಿ ಸಭೆಗಳ ಕು-ರಿತು ಸಾರ್ವಜನಿಕರಿಗೆ ಕನಿಷ್ಠ 15 ದಿನಗಳ ಮುಂಚಿತವಾಗಿ ಮನೆ-ಮನೆಗೆ ಕರಪತ್ರಗಳನ್ನು ವಿತರಿಸಿ ಮಾಹಿತಿ ನೀಡಲಾಗುತ್ತದೆ. ಈ ಕರಪತ್ರಗಳಲ್ಲಿ ಪೂರ್ವಮುದ್ರಿತ ಅರ್ಜಿ ನಮೂನೆ ಹಾಗೂ ಅಗತ್ಯ ದಾಖಲೆಗಳ ಪರಿಶೀಲನಾ ಪಟ್ಟಿಯನ್ನು ಒಳಗೊಂಡಿರುತ್ತದೆ. ಅಲ್ಲದೆ, ತಾಲ್ಲೂಕು ಅಥವಾ ಹೋಬಳಿ ವ್ಯಾಪ್ತಿಯ ನಿವಾಸಿಗಳಿಗೆ ಸಭೆಯ ದಿನಾಂಕ, ಸಮಯ, ಸ್ಥಳ ಹಾಗೂ ಅಧ್ಯಕ್ಷತೆ ವಹಿಸುವ ಜನಪ್ರತಿನಿಧಿಯ ವಿವರಗಳನ್ನು ತಿಳಿಸಲು ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಕಾಲ್ ಸೆಂಟರ್ ಮೂಲಕ ಹೊರಹೋಗುವ ಕರೆಗಳನ್ನು ಮಾಡಲಾಗುತ್ತದೆ.

ಸಾರ್ವಜನಿಕರು ತಮ್ಮ ಅರ್ಜಿಗಳು ಹಾಗೂ ಅಹವಾಲುಗಳನ್ನು ಮುಂಚಿತವಾಗಿ ಗ್ರಾಮ ಒನ್ ಕೇಂದ್ರದಲ್ಲಿಯೇ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ. ಪ್ರತಿ ಪ್ರಜಾಸೇವಾ ಅಭಿಯಾನ ಸಭೆಯ ಸ್ಥಳದಲ್ಲಿ ಗ್ರಾಮ ಒನ್ ಮಳಿಗೆಗಳನ್ನು ಸ್ಥಾಪಿಸಿ ಕಂಪ್ಯೂಟ-ರ್, ಲ್ಯಾಪ್‌ಟಾಪ್, ಪ್ರಿಂಟರ್ ಹಾಗೂ ಇಂಟರ್ನೆಟ್ ಸೌಲಭ್ಯಗಳ ಮೂಲಕ ಸಾರ್ವಜನಿಕರಿಗೆ ನೇರವಾಗಿ ಆನ್‌ಲೈನ್‌ನಲ್ಲಿ ಅರ್ಜಿ ಹಾಗೂ ಅಹವಾಲುಗಳನ್ನು ಸಲ್ಲಿಸಲು ವ್ಯವಸ್ಥೆ ಮಾಡಲಾಗುತ್ತದೆ. ಪ್ರಜಾಸೇವಾ ಅಭಿಯಾನ ಸಭೆಯ ದಿನದಂದು ಅಹವಾಲುಗಳನ್ನು ಎರಡು ಪ್ರತ್ಯೇಕ ಸರತಿಗಳಲ್ಲಿ ನಿರ್ವಹಿಸಲಾಗುತ್ತದೆ. ಮೊದಲನೆಯದು ಹೊಸ ಅಹವಾಲುಗಳ ಸರತಿ. ಇದರಲ್ಲಿ ಸಾರ್ವಜನಿಕರು ಮೊದಲ ಬಾರಿಗೆ ನೋಂದಾಯಿಸುವ ಅಹವಾಲುಗಳನ್ನು ದಾಖಲಿಸಲಾಗುತ್ತದೆ.

ಎರಡನೆಯದು ಪರಿಹಾರವಾಗದ ಅಥವಾ ಅಸಮಾಧಾನಕರವಾಗಿ ಪರಿಹರಿಸಲಾದ ಅಹವಾಲುಗಳ ಸರತಿ. ಈಗಾಗಲೇ ಸಕಾಲ ಅಥವಾ ಏಕೀಕೃತ ದೂರು ನಿವಾರಣೆ ತಂತ್ರಾಂಶದಲ್ಲಿ ನೋಂದಾಯಿಸಲಾಗಿದ್ದರೂ ಯಾವುದೇ ಪ್ರತಿಕ್ರಿಯೆ ದೊರೆಯದ ಅಥ-'ವಾ 21 ದಿನಗಳ ನಂತರವೂ ಸಮರ್ಪಕ ಪರಿಹಾರ ದೊರೆಯದ ಅಹವಾಲುಗಳನ್ನು ಈ ಸರತಿಯಲ್ಲಿ ಪರಿಗಣಿಸಲಾಗುತ್ತದೆ. ಈ ಸರತಿಯನ್ನು ಬಳಸಲು ಸಾರ್ವಜನಿಕರು ತಮ್ಮ ಸಕಾಲ, CSC ಅಥವಾ IP-GRS ಸಂಖ್ಯೆಯನ್ನು ನೀಡಬೇಕಾಗುತ್ತದೆ. ಸಮಯದ ಅಭಾವವಿದ್ದಲ್ಲಿ ಇಂತಹ ಅಹವಾಲುದಾರರಿಗೆ ಸಭೆಯ ಅಧ್ಯಕ್ಷತೆ ವಹಿಸುವ ಜನಪ್ರತಿನಿಧಿಯೊಂದಿಗೆ ನೇರವಾಗಿ ಸಂವಹನ ನಡೆಸಲು ಆದ್ಯತೆ ನೀಡಲಾಗುತ್ತದೆ.

ಸ್ಥಳದಲ್ಲಿಯೇ ಸೇವೆ ಹಾಗೂ ಅಹವಾಲುಗಳ ಪರಿಹಾರ: ಪ್ರಜಾಸೇವಾ ಅಭಿಯಾನ ಸಭೆಯ ಸಂದರ್ಭದಲ್ಲಿ ಅರ್ಹತೆ ಹೊಂದಿರುವ ಯೋಜನಾ ಫಲಾನುಭವಿಗಳಿಗೆ ಮಂಜೂರಾತಿ ಪತ್ರವನ್ನು ಸ್ಥಳದಲ್ಲಿಯೇ ವಿತ-ರಿಸಬಹುದಾಗಿದೆ.

ಅದೇ ರೀತಿ ಈಗಾಗಲೇ ಪರಿಹರಿಸಲಾದ ಅಹವಾಲುಗಳಿಗೆ ಸಂಬಂಧಿಸಿದಂತೆ ಪರಿಹಾರದ ಸೂಕ್ತ ಅನುಮೋದನೆ ಅಥವಾ ದೃಢೀಕರಣ ಪತ್ರವನ್ನು ಸ್ಥಳದಲ್ಲಿಯೇ ನೀಡಲಾಗುತ್ತದೆ. ಅರ್ಜಿಗಳು ಹಾಗೂ ಅಹವಾಲುಗಳ ಪ್ರಗತಿಯನ್ನು ಸಾರ್ವಜನಿಕರು ತಿಳಿದುಕೊಳ್ಳಲು ನೈಜ-ಸಮಯದ ಸ್ಥಿತಿ ಪರಿಶೀಲನಾ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ. ಇದರ ಮೂಲಕ ಅರ್ಜಿದಾರರು ತಮ್ಮ ಅರ್ಜಿ ಅಥವಾ ಅಹವಾಲಿನ ಪ್ರಗತಿಯನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಪ್ರತಿ ಸಭಾ ಸ್ಥಳದಲ್ಲಿ ವಿವಿಧ ಇಲಾಖೆಗಳ ಮಳಿಗೆಗಳನ್ನು ಸ್ಥಾಪಿಸಿ, ಸಂಬಂಧಿಸಿದ ಸರ್ಕಾರಿ ಯೋಜನೆಗಳ ಅರ್ಹತಾ ಮಾನದಂಡಗಳು ಹಾಗೂ ಅರ್ಜಿ ಸಲ್ಲಿಸುವ ವಿಧಾನವನ್ನು ಇಲಾಖಾವಾರು, ಸಾರ್ವಜನಿಕರಿಗೆ ತಿಳಿಸಲಾಗುತ್ತದೆ. ಇದರ ಜೊತೆಗೆ, ಉತ್ತಮ ಕಾರ್ಯಪದ್ಧತಿ ಪ್ರದರ್ಶನವನ್ನು ಆಯೋಜಿಸಲಾಗುತ್ತದೆ. ಸಭೆಯಲ್ಲಿ ಭಾಗವಹಿಸುವ ಸಾರ್ವಜನಿಕರಿಗೆ ಕುಡಿಯುವ ನೀರು ಹಾಗೂ ಮೂಲಭೂತ ವೈದ್ಯಕೀಯ ಸೌಲಭ್ಯಗಳನ್ನು ಸಹ ಒದಗಿಸಲಾಗುತ್ತದೆ. ಪ್ರತಿ ಪ್ರಜಾಸೇವಾ ಅಭಿಯಾನ ಸಭೆಯ ನಂತರ ಸಭೆಯ ಸಂಪೂರ್ಣ ವಿವರಗಳನ್ನು ಪೋರ್ಟಲ್‌ನಲ್ಲಿ ದಾಖಲಿಸಲಾಗುತ್ತದೆ. ಸಭೆಯ ಪ್ರಮುಖ ಅಂಶಗಳು, ಛಾಯಾಚಿತ್ರಗಳು, ವೀಡಿಯೋಗಳು ಹಾಗೂ ಫಲಾನುಭವಿಗಳ ಅಭಿಪ್ರಾಯಗಳನ್ನು ipgrs.karnataka.gov.in ಪೋರ್ಟಲ್‌ನಲ್ಲಿ ಹಾಗೂ ಸಾಮಾಜಿಕ ಜಾಲತಾಣದಲ್ಲಿ #prajasevaabhi-yana ಮೂಲಕ ಅಪ್‌ಲೋಡ್ ಮಾಡಲಾಗುತ್ತದೆ.

ಕರ್ನಾಟಕ ರಾಜ್ಯದ ವಿವಿಧ ಇಲಾಖೆಗಳ ಸೇವೆಗಳಿಗೆ ಮತ್ತು ಯೋಜನೆಗಳಿಗೆ ಸಂಬಂಧಿಸಿದ ಸಾರ್ವಜನಿಕ ಕುಂದುಕೊರತೆಗಳ ದೂರುಗಳ ನಿವಾರಣೆಗಾಗಿ ನಾಗರೀಕರು ಅಲೆದಾಡದೆ ಇರಲು, ಕರ್ನಾಟಕ ಸರ್ಕಾರವು, ಪ್ರಜಾಸೇವೆ ಇಲಾಖೆಯಡಿಯಲ್ಲಿ ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ (Integrated Public Grievance Re-dressal System) ಎಂಬ ಬಹು-ಮುಖಿಯಾದ, ದತ್ತಾಂಶ ಆಧಾರಿತ ಮತ್ತು ಕಾಗದರಹಿತ ತಂತ್ರಾಂಶ ವ್ಯವಸ್ಥೆಯನ್ನು ರೂಪಿಸಿದೆ.

ನಾಗರೀಕರು ಸಹಾಯವಾಣಿ ಸಂಖ್ಯೆ: 1902 ಅಥವಾ https://ipgrs.karnataka.gov.in ಅಥವಾ ಜನಸ್ಪಂದನ ಮೊಬೈಲ್ ಆಪ್ ಮೂಲಕ ತಮ್ಮ ಕುಂದುಕೊರತೆಗಳನ್ನು ದಾಖಲಿಸಬಹುದು. ಅಲ್ಲದೆ, ನಾಗರೀಕರಿಂದ ಕುಂದುಕೊರತೆ ಅಥವಾ ದೂರುಗಳನ್ನು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಉಪಯೋಗಿಸಿ ಮೂರು ಹಂತದ ದೂರು ನಿವಾರಣಾ ವ್ಯವಸ್ಥೆಯ ಮೂಲಕ ಸಾರ್ವಜನಿಕ ಸಮಸ್ಯೆಗೆ ಪರಿಹಾರ ನೀಡಲಾಗುತ್ತಿದೆ. ಪ್ರಜಾಸೇವಾ ಅಭಿಯಾನ ಸಭೆಗಳಲ್ಲಿ ಸ್ವೀಕರಿಸಲಾದ ಎಲ್ಲಾ ಅರ್ಜಿಗಳು ಮತ್ತು ಅಹವಾಲುಗಳನ್ನು ಒಂದೇ ವಾರದಲ್ಲಿ ವ್ಯವಸ್ಥಿತವಾಗಿ ಪರಿಶೀಲಿಸಲಾಗುತ್ತದೆ. ಈ ಪರಿಶೀಲನೆಯನ್ನು ಪ್ರತಿ ಬುಧವಾರ ಮೂರು ಹಂತಗಳಲ್ಲಿ ನಡೆಸಲಾಗುತ್ತದೆ.

ಬೆಳಿಗ್ಗೆ 9.00ರಿಂದ 11.00ರವರೆಗೆ ತಾಲ್ಲೂಕು ಮಟ್ಟದ ಪರಿಶೀಲನೆ ನಡೆಸಲಾಗುತ್ತದೆ. ತಹಶೀಲ್ದಾರ್ ಹಾಗೂ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಹಂತದಲ್ಲಿ ಸ್ವೀಕರಿಸಿದ ಅರ್ಜಿಗಳು ಮತ್ತು ಅಹವಾಲುಗಳ ಸ್ಥಿತಿಯನ್ನು ತಮ್ಮ ಅಧಿಕಾರಿಗಳೊಂದಿಗೆ ತಂತ್ರಾಂಶಗಳನ್ನು ಬಳಸಿ ಅವರ ಹಂತದಲ್ಲಿ ನಿವಾರಣೆ ಆಗದೆ ಇರುವ ಅರ್ಜಿಗಳನ್ನು ಉಪವಿಭಾಗಾಧಿಕಾ-ರಿಗಳಿಗೆ ಇ-ಕಛೇರಿ ಮೂಲಕ ಮಂಡಿಸುತ್ತಾರೆ. ಬೆಳಿಗ್ಗೆ 11.00ರಿಂದ ಮಧ್ಯಾಹ್ನ 1.00ರವರೆಗೆ ಉಪವಿಭಾಗ ಮಟ್ಟದ ಪರಿಶೀಲನೆ ನಡೆಸಲಾಗುತ್ತದೆ. ಉಪವಿಭಾಗದ ಸಹಾಯಕ ಆಯುಕ್ತರು ತಾಲ್ಲೂಕು ಮಟ್ಟದಿಂದ ಬಂದ ಮಾಹಿತಿಯನ್ನು ಕ್ರೋಢೀಕರಿಸಿ ಪರಿಶೀಲಿಸುತ್ತಾರೆ. ತಮ್ಮ ಹಂತದಲ್ಲಿ ನಿವಾರಣೆ ಆಗದೆ ಇರುವ ವಿಷಯ, ಅರ್ಜಿಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸುತ್ತಾರೆ.

ಮಧ್ಯಾಹ್ನ 3.00ರಿಂದ ಸಂಜೆ 5.00ರವರೆಗೆ ಜಿಲ್ಲಾ ಮಟ್ಟದ ಪರಿಶೀಲನೆ ನಡೆಯಲಾಗುತ್ತದೆ. ಜಿಲ್ಲಾಧಿಕಾರಿಗಳು ಉಪವಿಭಾಗ ಮಟ್ಟದಿಂದ ಬಂದ ಮಾಹಿತಿಯನ್ನು ಕ್ರೋಢೀಕರಿಸಿ ಜಿಲ್ಲಾ ಮಟ್ಟದಲ್ಲಿ ಪರಿಶೀಲಿಸುತ್ತಾರೆ. ಜಿಲ್ಲಾಧಿಕಾರಿಗಳು ಅಗತ್ಯವಿದ್ದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಖುದ್ದಾಗಿ ಹಾಜರಾಗುವಂತೆ ಸೂಚಿಸಬಹುದು. ಉಪವಿಭಾಗ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ವೀಡಿಯೋ ಅಥ-'ವಾ ಆಡಿಯೋ ಕಾನ್ಫರೆನ್ಸ್ ಮೂಲಕ ಭಾಗವಹಿಸಲು ಅವಕಾಶ ನೀಡಬಹುದು. ಪ್ರತಿ ಹಂತದಲ್ಲಿಯೂ ಪರಿಹಾರದ ಬಗ್ಗೆ ಅಸಮಾಧಾನ ಹೊಂದಿರುವ ಸಾರ್ವಜನಿಕರು ಸಂಬಂಧಿಸಿದ ಅಧಿಕಾರಿಯ ಮುಂದೆ ಖುದ್ದಾಗಿ ಹಾಜರಾಗಿ ತಮ್ಮ ಅಹವಾಲನ್ನು ಮಂಡಿಸಲು ಅವಕಾಶವಿರುತ್ತದೆ.

ಈ ವ್ಯವಸ್ಥೆಯು ಈಗಾಗಲೇ ಜಾ-ರಿಯಲ್ಲಿರುವ ವಾರದ ಜಿಲ್ಲಾಧಿಕಾರಿ ಮಟ್ಟದ ಪರಿಶೀಲನಾ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶ ಹೊಂದಿದ್ದು, ಅದಕ್ಕೆ ಯಾವುದೇ ರೀತಿಯ ವಿರುದ್ಧತೆಯನ್ನು ಉಂಟುಮಾಡದೆ, ಒಂದೇ ದಿನದಲ್ಲಿ ಕ್ರಮವಾಗಿ ಮೂರು ಹಂತಗಳ ಪರಿಶೀಲನಾ ಸಭೆಗಳನ್ನು ನಡೆಸುವ ವ್ಯವಸ್ಥೆಯನ್ನು ರೂಪಿಸುತ್ತದೆ. ಆದುದರಿಂದ ಶನಿವಾರ ಹಾಗೂ ಬುಧವಾರ ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ ಬೇರೆ ಯಾವ ಸಭೆಯನ್ನು ನಡೆಸಲು ನಿಷೇಧಿಸಲಾಗಿದೆ.

ಮೇಲ್ಮನವಿ, ಹೊಣೆಗಾರಿಕೆ ಹಾಗೂ ವರದಿ ಸಲ್ಲಿಕೆ:

ನಿಗದಿತ ಅವಧಿಯೊಳಗೆ ವಿಲೇವಾರಿಯಾಗದ ಅರ್ಜಿಗಳು ಮತ್ತು ಅಹವಾಲುಗಳನ್ನು ಸಂಬಂಧಿಸಿದ ಇಲಾಖೆಯ ಮುಖ್ಯಸ್ಥರಿಗೆ ಸ್ವಯಂಚಾಲಿತವಾಗಿ ಮೇಲ್ದರ್ಜೆಗೆ ವರ್ಗಾಯಿಸುವ ವ್ಯವಸ್ಥೆಯನ್ನು ಜಾ-ರಿಗೆ ತರಲಾಗುತ್ತದೆ. ಈ ಮೂಲಕ ಬಾಕಿ ಉಳಿದಿರುವ ಅರ್ಜಿಗಳು ಮತ್ತು ಅಹವಾಲುಗಳ ಬಗ್ಗೆ ಸಂಬಂಧಿಸಿದ ಇಲಾಖೆಯ ಉನ್ನತ ಮಟ್ಟದಲ್ಲಿ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ.

ಪ್ರತಿ ಜಿಲ್ಲೆಗೆ ಒಬ್ಬ ಸರ್ಕಾರದ ಕಾರ್ಯದರ್ಶಿಯವರನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಆಗಿ ನೇಮಿಸಲಾಗಿದೆ. ಅವರು ಪ್ರತಿ ಮೊದಲನೇ ಹಾಗೂ ಮೂರನೇ ಶುಕ್ರವಾರ ಜಿಲ್ಲೆಗೆ ಭೇಟಿ ನೀಡಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಶನಿವಾರ ದಿನ ನಡೆಯುವ ಸಭೆಗೆ ಪೂರ್ವಭಾವಿ ಸಿದ್ಧತೆ ಹಾಗೂ ಮೇಲ್ವಿಚಾರಣೆ ಮಾಡುವರು. ಜಿಲ್ಲಾ ಮಟ್ಟದಲ್ಲಿ ನಿವಾರಣೆ ಆಗದೆ ಇರುವ ವಿಷಯಗಳನ್ನು ರಾಜ್ಯ ಮಟ್ಟದ ಸಹೋದ್ಯೋಗಿಗಳಾದ ಇತರ ಇಲಾಖೆ ಕಾರ್ಯದರ್ಶಿಗಳೊಂದಿಗೆ ಪರಾಮರ್ಶಿಸಿ ಹಾಗೂ ಅಹವಾಲುಗಳನ್ನು ಇ-ಕಛೇರಿ ಮೂಲಕ ಅವರಿಗೆ ತಲುಪಿಸಿ ಸಮಸ್ಯೆಗಳನ್ನು ಬಗೆಹರಿಸತಕ್ಕದ್ದು. ಇದಕ್ಕಾಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪೋರ್ಟಲ್ ಅನ್ನು ಸ್ಥಾಪಿಸಲಾಗಿದೆ. ಇದನ್ನು ಮುಖ್ಯ ಕಾರ್ಯದರ್ಶಿಯವರು ಪ್ರತಿ ತಿಂಗಳು ನಡೆಯುವ ಎಲ್ಲಾ ಕಾರ್ಯದರ್ಶಿಗಳ ಸಭೆಯಲ್ಲಿ ಪರಿಶೀಲಿಸುತ್ತಾರೆ.

ಅಲ್ಲದೆ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಪರಿಶೀಲನಾ ಸಭೆಯಲ್ಲಿ ಜಿಲ್ಲೆಗಳಲ್ಲಿ ಬಾಕಿ ಉಳಿದಿರುವ ಅರ್ಜಿಗಳು ಮತ್ತು ಅಹವಾಲುಗಳ ವಿಲೇವಾರಿಯ ಪ್ರಗತಿಯನ್ನು ಅವಲೋಕಿಸಲಾಗುತ್ತದೆ. ಮಾತ್ರವಲ್ಲ, ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿ ಜಿಲ್ಲೆ, ಹೋಬಳಿ, ತಾಲ್ಲೂಕು ಇಲಾಖೆವಾರು ಬಾಕಿ ಇರುವ ಸಮಸ್ಯೆಗಳನ್ನು ಚರ್ಚಿಸಿ ನೀತಿ ಅಥವಾ ಯೋಜನೆಗಳ ಪರಿಷ್ಕರಣೆ ಬಗ್ಗೆ ಅಗತ್ಯ ವಿಮರ್ಶೆಗಳನ್ನು ನಡೆಸುತ್ತಾರೆ. ಒಟ್ಟಾರೆಯಾಗಿ, ಮಾನ್ಯ ಮುಖ್ಯಮಂತ್ರಿಗಳ ನೇತೃತ್ವ ಹಾಗೂ ನಿರ್ದೇಶನದಂತೆ ಪ್ರಜಾಸೇವಾ ಅಭಿಯಾನ ಸಭೆಗಳ ಉದ್ದೇಶವು ಸಾರ್ವಜನಿಕರ ಹತ್ತಿರ ಇಡೀ ಆಡಳಿತ ತಂತ್ರವನ್ನು ವಿಕೇಂದ್ರೀಕರಿಸಿ, ಪ್ರಜಾಪ್ರಭುತ್ವವನ್ನು ಸಂವಿಧಾನದ ಆಶಯದಂತೆ ಜನಪರ ಸರ್ಕಾರ ನಡೆಸಲು ಒಂದು ವಿನೂತನ ಪ್ರಯಾಸವಾಗಿದೆ.

ಈ ಮೂಲಕ ಅಹವಾಲುಗಳನ್ನು ನೇರವಾಗಿ ಆಲಿಸುವುದರ ಜೊತೆಗೆ, ಅರ್ಜಿಗಳ ತ್ವ-ರಿತ ವಿಲೇವಾರಿ, ಸ್ಥಳದಲ್ಲಿಯೇ ಸೇವೆ ಒದಗಿಸುವಿಕೆ, ಅಹವಾಲುಗಳ ನಿರಂತರ ಪರಿಶೀಲನೆ, ಅಧಿಕಾರಿಗಳ ಹೊಣೆಗಾರಿಕೆ ಮತ್ತು ನಾಗರಿಕರಿಗೆ ಪಾರದರ್ಶಕ ವರದಿ ನೀಡುವ ವ್ಯವಸ್ಥೆಯನ್ನು ಖಚಿತಪಡಿಸುವುದಾಗಿದೆ. ಆದುದರಿಂದ, ಜನರಿಂದ, ಜನರಿಗಾಗಿ, ಜನರಿಗೋಸ್ಕರ ರೂಪಿಸಿರುವ ಸರ್ಕಾರದ ಈ ಮಹತ್ವಾಕಾಂಕ್ಷೆಯ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಾರ್ವಜನಿಕರು ತಮ್ಮ ಕುಂದು ಕೊರತೆಗಳನ್ನು ಪರಿಹ-ರಿಸಿಕೊಳ್ಳಲು ಈ ವೇದಿಕೆಯ ಸದುಪಯೋಗವನ್ನು ಪಡೆಯುತ್ತೀರೆಂದು ಆಶಿಸುತ್ತೇನೆ!! ಮಾತ್ರವಲ್ಲ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ತಿಳುವಳಿಕೆ ಪಡೆಯಲು ಹಾಗೂ ಸರ್ಕಾರಕ್ಕೆ ತಮ್ಮ ಸಲಹೆ ಸೂಚನೆ ನೀಡಲು ಇದು ಒಂದು ಅನುಭವ ಮಂಟಪವಾಗಿ ನಿರಂತರ ನಡೆಯುವ ಉಪಕ್ರಮವಾಗಲಿದೆ ಹಾಗೂ ಎಲ್ಲಾ ಲೋಕತಂತ್ರ ವ್ಯವಸ್ಥೆಗಳಿಗೆ ಮಾದ-ರಿಯಾಗಿ ದಾರಿದೀಪವಾಗುತ್ತದೆ ಎಂದು ನನ್ನ ವಿಶ್ವಾಸ.



**ಡಾ.ಶಾಲಿನಿ ರಜನೀಶ್**
**ಸರ್ಕಾರದ ಮುಖ್ಯ ಕಾರ್ಯದರ್ಶಿಗಳು**
**ಕರ್ನಾಟಕ ಸರ್ಕಾರ**

## ಶಿಕ್ಷಕರ ವೃತ್ತಿ ಅತ್ಯಾಮೂಲ್ಯವಾದದ್ದು : ಕೆ.ಪಿ.ಪಾಲಯ್ಯ



ಹರಪನಹಳ್ಳಿ: ತಾಲ್ಲೂಕಿನ ಜಂಗಮ ತುಂಬಿಗೆರೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ನಿವೃತ್ತಿ ಹೊಂದಿದ ಸಮಾಜ ವಿಜ್ಞಾನ ಶಿಕ್ಷಕ ಸೋಮಪ್ಪ ಉಪ್ಪಾರ ಅವರಿಗೆ ಬೀಳ್ಕೊಡಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಪಂಚಾಯಿತಿ ಸದಸ್ಯ ಮಾಜಿ ಕೆ ಪಿ ಪಾಲಯ್ಯ ಮಾತನಾಡಿ ಶಿಕ್ಷಕರ ವೃತ್ತಿ ಜೀವನ ಅಮೂಲ್ಯವಾದುದು ಎಂದು ಸೋಮಪ್ಪ ಉಪ್ಪಾರ ಸೇವೆ ಕುರಿತು ಗುಣಗಾನ ಮಾಡಿದರು. ನಿವೃತ್ತಿ ಹೊಂದಿದ ಸೋಮಪ್ಪ ಉಪ್ಪಾರ ಇವರು ಸನ್ಮಾನ ಸ್ವೀಕರಿಸಿ ಮಾತನಾಡಿದರು. ಮುಖ್ಯ ಗುರುಗಳಾದ ಮಧುಸೂಧನ್ ಬಿ ಟಿ ಪ್ರಾಸ್ತವಿಕವಾಗಿ ಮಾತನಾಡಿದರು. ನಿವೃತ್ತಿ ಹೊಂದಿದ ಸೋಮಪ್ಪ ಉಪ್ಪಾರ ಅವರಿಗೆ ಶಾಲೆ, ಊರಿನ ಗ್ರಾಮಸ್ತರು, ಸುತ್ತಮುತ್ತಲಿನ ಶಾಲೆಯ ಶಿಕ್ಷಕರು, ಹಳೆಯ ವಿದ್ಯಾರ್ಥಿಗಳು, ಶಾಲ ಮಕ್ಕಳು ಕೇಕ್ ಕತ್ತರಿಸುವ ಮೂಲಕ ಅದ್ದೂರಿಯಾಗಿ ಸನ್ಮಾನಿಸಲಾಯಿತು. ಕ್ಷೇತ್ರ ಶಿಕ್ಷಣ ಅಧಿಕಾರಿ ಹೆಚ್ ಲೇಪಾಕ್ಷಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಕೆ ಅಂಜಿನಪ್ಪ ಗ್ರಾಮದ ಮುಖಂಡರಾದ ತುಂಬಿಗೇರಿ ಶಿವಣ್ಣ, ರವೀಂದ್ರ, ಪರಶುರಾಮಪ್ಪ, ಕೃಷ್ಣಮೂರ್ತಿ, ಪರುಸಪ್ಪ, ಮಂಜಪ್ಪ, ಶಿಕ್ಷಕರಾದ ಕೊಟ್ರೇಶಿ, ಅಜಯ್, ಸಿದ್ದೇಶಿ, ಭಾಗ್ಯಲಕ್ಷ್ಮಿ, ಶಶಿಕಲಾ, ಶಿವಯೋಗಿ, ಶಿವಮೂರ್ತೆಪ್ಪ, ಸುತ್ತಮುತ್ತಲಿನ ಗ್ರಾಮದ ಶಾಲೆಯ ಶಿಕ್ಷಕರು, ಗ್ರಾಮದ ಮುಖಂಡರು, ಶಾಲ ವಿದ್ಯಾರ್ಥಿಗಳು ಹಾಜರಿದ್ದರು.

## ಸೆಪ್ಟಂಬರ್ 04ರಂದು ನೇರ ಪ್ರದರ್ಶನ ಕಾರ್ಯಕ್ರಮ

ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ರಾಯಚೂರು ಹಾಗೂ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಗೂ ಸೆಲ್ಕೋ ಫೌಂಡೇಶನ್, ಬೆಂಗಳೂರು ಇವರ ಸಂಯುಕ್ತಾಶ್ರದಲ್ಲಿ ಸ್ವಾವಲಂಬಿ ಬದುಕಿನತ್ತ-ವಿಕಲಚೇತನ-ರಿಗಾಗಿ ಜೀವನೋಪಾಯ ತಂತ್ರಜ್ಞಾನಗಳ ನೇರ ಪ್ರದರ್ಶನವನ್ನು ಸೆಪ್ಟಂಬರ್ 04ರ ಬೆಳಿಗ್ಗೆ 9.30ಕ್ಕೆ ರಾಯಚೂರಿನ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ಎಲ್ಲಾ ಅರ್ಹ ವಿಕಲಚೇತನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕೊಟ್ಟೂರು ಮತ್ತು ಕೂಡ್ಲಿಗಿಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲು ರೈತ ಸಂಘ ಒತ್ತಾಯ

## ಸೆ.5ರಂದು ಕೂಡ್ಲಿಗಿಯಲ್ಲಿ ಮುಖ್ಯ ಮಂತ್ರಿಗೆ ಮುತ್ತಿಗೆ : ಸಿ.ಗಾಳೆಪ್ಪ ಎಚ್ಚರಿಕೆ



ಕೊಟ್ಟೂರು: ಕೊಟ್ಟೂರು ಮತ್ತು ಕೂಡ್ಲಿಗಿ ಉಭಯ ತಾಲೂಕುಗಳನ್ನು ಶೀಘ್ರ ಬರಪೀಡಿತ ಪ್ರದೇಶವೆಂದು ಘೋಷಿಸದಿದ್ದರೆ ಸೆ-5ಕ್ಕೆ ಕೂಡ್ಲಿಗಿಗೆ ಆಗಮಿಸುತ್ತಿರುವ ಮುಖ್ಯ ಮಂತ್ರಿ ಡಿ.ಕೆ ಶಿವಕುಮಾರ್ ರಿಗೆ ಮುತ್ತಿಗೆ ಹಾಕುವುದಾಗಿ ರೈತ ಸಂಘದ ಜಿಲ್ಲಾ ಅಧ್ಯಕ್ಷ ಸಿ.ಗಾಳೆಪ್ಪ ಎಚ್ಚರಿಕೆ ನೀಡಿದರು.

ಪಟ್ಟಣದಲ್ಲಿ ಸೋಮವಾರ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ವಾಸುದೇವ ಮೇಟಿ)ಬಣವು ಕೊಟ್ಟೂರು ತಾಲೂಕನ್ನು ಬರಪಟ್ಟಿಯಿಂದ ಕೈಬಿಟ್ಟಿರುವುದನ್ನು ತೀವ್ರವಾಗಿ ಖಂಡಿಸಿ ಕೈಗೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದರು. ವಿಜಯನಗರ ಜಿಲ್ಲೆಯ ನಾಲ್ಕು ತಾಲೂಕಿಗೆ ಒಂದಿಲ್ಲೊಂದು ರೀತಿಯಲ್ಲಿ ಕೃಷಿ ಚಟುವಟಿಕೆಗಳಿಗೆ ನೀರಿನ ಸೌಲಭ್ಯಗಳಿವೆ ಆದರೆ ಯಾವುದೇ ನೀರಿನ ಸಂಪರ್ಕ, ಸೌಲಭ್ಯ ಇಲ್ಲದೆ ಮಳೆಯಾಶ್ರಿತ ತಾಲೂಕುಗಳಾಗಿರುವ ಕೊಟ್ಟೂರು ಮತ್ತು ಕೂಡ್ಲಿಗಿ ತಾಲೂಕುಗಳನ್ನು ಬರ ಪಟ್ಟಿಯಿಂದ ಹೊರಗಿಟ್ಟಿರುವುದು ಎಷ್ಟರಮಟ್ಟಿಗೆ ಸೂಕ್ತ ಎಂದು ಪ್ರಶ್ನಿಸಿದರು.

ಸಕಾಲದಲ್ಲಿ ಮಳೆ ಕೊರತೆಯಿಂದಾಗಿ ಬಿತ್ತಿದ ಬೀಜಗಳು ಮೊಳಕೆ ಹಂತದಲ್ಲಿಯೇ ನಾಶವಾಗಿ ರೈತರು ಆರ್ಥಿಕ ಸಂಕಷ್ಟಕ್ಕೀಡಾಗಿದ್ದಾರೆ.ಗ್ರಾಮೀಣ ಭಾಗದಲ್ಲಿ ಮಳೆ ಕೊರತೆಯಿಂದಾಗಿ ರೈತರು ನಷ್ಟ ಅನುಭವಿಸುತ್ತ, ದುಡಿಯುವ ಕೈಗಳಿಗೆ ಕೆಲಸ ಇಲ್ಲದೆ ಜೀವನ ನಿರ್ವಹಣೆಗೆ ಪರದಾಡುತ್ತಿದ್ದಾರೆ.ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿನ ರೈತರನ್ನು ತಾಲೂಕು ಮಟ್ಟದ ಅಧಿಕಾರಿಗಳು ತಹಶೀಲ್ದಾರರು ಮತ್ತು ಕೃಷಿ ಇಲಾಖೆ ಅಧಿಕಾರಿಗಳು ಪ್ರತಿ ಹಳ್ಳಿಗಳಿಗೆ ಭೇಟಿ ನೀಡಿ ವಸ್ತುನಿಷ್ಠ ವರದಿ ನೀಡಬೇಕಿತ್ತು ಇವರ ನಿರ್ಲಕ್ಷ್ಯತೆಯಿಂದಾಗಿ ಉಭಯ ತಾಲೂಕಿನ ರೈತ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಂತಹ ಅಧಿಕಾರಿಗಳನ್ನು ತಕ್ಷಣ ಅಮಾನತ್ತುಗೊಳಿಸಬೇಕೆಂದು ಆಗ್ರಹಿಸಿ ಗ್ರೇಡ್-2 ತಹಸಿಲ್ದಾರ ಪ್ರತಿಭಾ ಎಂ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಪ್ರತಿಭಟನಾ ಮೆರವಣಿಗೆಯು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನದಿಂದ ಪ್ರಾರಂಭಗೊಂಡು ಬಸ್ ನಿಲ್ದಾಣದವರಿಗೆ ಆಗಮಿಸಿ ತಮಗಾಗಿರುವ ಅನ್ಯಾಯಕ್ಕೆ ರೈತರು ರಸ್ತೆಯುದ್ದಕ್ಕೂ ಉರುಳಾಡಿ ಪ್ರತಿಭಟಿಸಿದರು. ಪ್ರತಿಭಟನೆ ವೇಳೆ ಪಿಐ ಡಿ.ದುರುಗಪ್ಪ ನೇತೃತ್ವದಲ್ಲಿ ಸೂಕ್ತ ಬಂದೋಬಸ್ತ್ ನೀಡಲಾಗಿತ್ತು.

ಪ್ರತಿಭಟನೆಯಲ್ಲಿ ರೈತ ಸಂಘದ ಮಹಿಳಾ ಘಟಕದ ತಾಲೂಕು ಅಧ್ಯಕ್ಷೆ ಸಿ.ರೇಖಾ, ಹೋಬಳಿ ಅಧ್ಯಕ್ಷೆ ಕೆ. ಪವಿತ್ರ, ರೈತರಾದ ಸಿದ್ದೇಶ, ಹನುಮಂತಪ್ಪ, ನಾಗಮ್ಮ, ಸಿದ್ದಮ್ಮ, ನಿಂಗಮ್ಮ, ಸಾಕಮ್ಮ, ಅಂಜೀನಪ್ಪ ಸೇರಿದಂತೆ ನೂರಾರು ರೈತರು ಪಾಲ್ಗೊಂಡಿದ್ದರು.

## ಸರ್ಕಾರಿ ಶಾಲಾ ಆವರಣದಲ್ಲಿ ಖಾಸಗಿ ಕಾರ್ಯಕ್ರಮಗಳಿಗೆ ಬ್ರೇಕ್ ಹಾಕಿ : SFI ಆಗ್ರಹ

ಕೂಡ್ಲಿಗಿ: ತಾಲೂಕಿನ ಸರ್ಕಾರಿ ಶಾಲೆಗಳ ಮೈದಾನ, ಆವರಣ ಹಾಗೂ ಕೊಠಡಿಗಳನ್ನು ಖಾಸಗಿ ಕಾರ್ಯಕ್ರಮಗಳಿಗೆ ನೀಡುವುದನ್ನು ಕೂಡಲೇ ನಿಲ್ಲಿಸಬೇಕು ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ (SFI) ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಪಟ್ಟಣದ ಸ.ಕ.ಮಾ.ಹಿ.ಪ್ರಾ. ಬಾಲಕರ (ಮೇನ್ ಬಾಯ್ಸ್) ಶಾಲೆ ಸೇರಿದಂತೆ ಹಲವು ಸರ್ಕಾರಿ ಶಾಲೆಗಳ ಮೈದಾನಗಳನ್ನು ನಿಯಮಬಾಹಿರವಾಗಿ ಆರ್ಕೆಸ್ಟ್ರಾ, ಜಾತ್ರೆ, ಹಬ್ಬ ಹಾಗೂ ಖಾಸಗಿ ಸಂಘ-ಸಂಸ್ಥೆಗಳ ಸಭೆ-ಸಮಾರಂಭಗಳಿಗೆ ಬಳಸಲಾಗುತ್ತಿದೆ ಎಂದು ಆರೋಪಿಸಿದೆ.

ಸರ್ಕಾರಿ ಶಾಲೆಗಳ ಆಸ್ತಿ ಕೇವಲ ಶೈಕ್ಷಣಿಕ ಚಟುವಟಿಕೆಗೆ ಮಾತ್ರ ಮೀಸಲು ಎಂದು ಉಪನಿರ್ದೇಶಕರು (ಆಡಳಿತ) ಬೆಂಗಳೂರು, ಉಪನಿರ್ದೇಶಕರು ಬಳ್ಳಾರಿ, ಲೋಕಾಯುಕ್ತರು ಹಾಗೂ ಜಿಲ್ಲಾಧಿಕಾ-ರಿಗಳು ಸ್ಪಷ್ಟ ಆದೇಶ ಹೊರಡಿಸಿದ್ದಾರೆ. ಆದರೂ ಆದೇಶ ಕಡೆಗಣಿಸಿ ಅನುಮತಿ



ನೀಡುತ್ತಿರುವುದು ಶಾಲಾ ಪರಿಸರದ ಪಾವಿತ್ರ್ಯತೆ ಮತ್ತು ಮಕ್ಕಳ ಸುರಕ್ಷತೆಗೆ ಧಕ್ಕೆ ತರುತ್ತಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ತಕ್ಷಣ ಎಲ್ಲಾ ಸರ್ಕಾರಿ ಶಾಲೆಗಳ ಮುಖ್ಯದ್ವಾರದಲ್ಲಿ 'ಶಾಲಾ ಆವರಣದಲ್ಲಿ ಖಾಸಗಿ ಕಾರ್ಯಕ್ರಮಗಳಿಗೆ ಅವಕಾಶವಿಲ್ಲ' ಎಂಬ ನಾಮಫಲಕ ಅಳವಡಿಸಬೇಕು, ನಿಯಮ ಮೀರುವವರ ವಿರುದ್ಧ ಪೊಲೀಸ್ ದೂರು ದಾಖಲಿಸಬೇಕು. ಆದೇಶ ಉಲ್ಲಂಘನೆ ಮುಂದುವರಿದರೆ ಕಾನೂನು ಹೋರಾಟ ಮತ್ತು ತೀವ್ರ ಪ್ರತಿಭಟನೆ ನಡೆಸಲಾಗುವುದು ಎಂದು SFI ಜಿಲ್ಲಾ ಸಮಿತಿಯ ಕೆ.ಎ. ಪವನ್ ಕುಮಾರ್ (SFI ಜಿಲ್ಲಾ ಜಂಟಿ ಕಾರ್ಯದರ್ಶಿ), ಈ. ಮಂಜುನಾಥ್ (DYFI ಜಿಲ್ಲಾ ಅಧ್ಯಕ್ಷ) ಮತ್ತು ವಿ. ಸ್ವಾಮಿ (DYFI ಜಿಲ್ಲಾ ಕಾರ್ಯದರ್ಶಿ) ಎಚ್ಚರಿಕೆ ನೀಡಿದ್ದಾರೆ.

## ಮಳೆಗಾಗಿ ಪ್ರಾರ್ಥಿಸಿ ಗ್ರಾಮಗಳಲ್ಲಿ ಆಹೋರಾತ್ರಿ ಭಜನೆ



ಹಗರಿಬೊಮ್ಮನಹಳ್ಳಿ: ಕೈಕೊಟ್ಟ ಮುಂಗಾರು ಮಳೆಯಿಂದ ತಾಲೂಕು ಭೀಕರ ಬರಕ್ಕೆ ತತ್ತರಿಸಿದೆ. ರೈತರ ಬದುಕು ಅಕ್ಷರಶಃ ಬಸುವಳಿದು ಜೀವಕಳೆ ಕಾಣದೇ ಕಂಗಲಾಗಿದ್ದಾರೆ. ಇಂತಹ ಸಂದಿಗ್ಧ ಪ್ರಕೃತಿಯ ವಿಕೋಪ ಪರಿಸ್ಥಿತಿಯಲ್ಲಿ ವರುಣ ಕರುಣೆ ತೋರಿ ಮಳೆ ಸುರಿಸಿ ತಾಲೂಕು ಬರದಿಂದ ಮುಕ್ತಿಯಾಗಿ ಮಾಲವಿ ಜಲಾಶಯ ತುಂಬಿ ರೈತರ ಕೃಷಿಗೆ ವರದಾನವಾಗಲಿ ಎಂದು ತಾಲೂಕು ಉಲವತ್ತಿ ಗ್ರಾಮದ ಸರ್ವಧರ್ಮ ನಾಗರಿಕರು ಒಂಭತ್ತು ದಿನಗಳ ಕಾಲ ಭಜನೆ ವೃತ ಮಾಡಿ ಪ್ರಾರ್ಥಿಸಿದರು.

ತಾಲ್ಲೂಕಿನ ಗದ್ದಿಕೆರೆ ಗ್ರಾಮದಲ್ಲಿಯೂ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಮಳೆಗಾಗಿ ಹಾಗೂ ಬರಗಾಲದ ಸಂಕಷ್ಟ ನಿವಾರಣೆಗಾಗಿ ಆಹೋರಾತ್ರಿ 24 ಗಂಟೆಗಳ ಕಾಲ ನಿರಂತರ ಭಜನಾ ಕಾರ್ಯಕ್ರಮ ನಡೆಯಿತು. ವರುಣನ ಕೃಪೆ ದೊರೆಯಲಿ, ಬರಗಾಲದ ಬವಣೆ ನೀಗಲಿ ಎಂಬ ಭಕ್ತರ ಆಶಯದೊಂದಿಗೆ ಧಾರ್ಮಿಕ ಆಚರಣೆ ಹಾಗೂ ಭಜನಾ ಸೇವೆಯನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ಭಕ್ತರು ಪಾಲ್ಗೊಂಡು ಭಜನೆ, ಸಂಕೀರ್ತನೆ ಹಾಗೂ ದೇವರ ನಾಮಸ್ಮರಣೆಯಲ್ಲಿ ತೊಡಗಿದರು. ಭಜನಾ ಸೇವೆಯಲ್ಲಿ ಭಾಗವಹಿಸಿದ ಭಕ್ತರು ನಿಯಮಾನುಸಾರ ಗಂಟೆಗೊಮ್ಮೆ ಸ್ನಾನ ಮಾಡಿ, ಭಕ್ತಿಭಾವದಿಂದ ನಿರಂತರವಾಗಿ ಸೇವೆ ಸಲ್ಲಿಸಿದರು. ಗ್ರಾಮಸ್ಥರು ಹಾಗೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮಕ್ಕೆ ಸಹಕಾರ ನೀಡಿದರು. ಮಳೆಗಾಗಿ ಪ್ರಾರ್ಥಿಸಿ ಇಂತಹ ಧಾರ್ಮಿಕ ಆಚರಣೆಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದು ಗದ್ದಿಕೆರೆ ಪುಣ್ಯಕ್ಷೇತ್ರದ ವಿಶೇಷತೆಯಾಗಿದೆ. ಕಾರ್ಯಕ್ರಮವು ಭಕ್ತಿಭಾವದ ವಾತಾವರಣದಲ್ಲಿ ಯಶಸ್ವಿಯಾಗಿ ನೆರವೇರಿತು. ನಂತರ ಪ್ರಸಾದ ವ್ಯವಸ್ಥೆಯನ್ನು ಕಲ್ಪಿಸಿದ್ದರು.

## ವಿವಿಧ ಹುದ್ದೆಗಳ ಅಭ್ಯರ್ಥಿ ಆಯ್ಕೆ ಪಟ್ಟಿ ಪ್ರಕಟ

ವಿಜಯನಗರ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧೀನದ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಖಾಲಿ ಇರುವ 14 ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿಗಳು ಮತ್ತು 5 ಫಾರ್ಮಸಿ ಅಧಿಕಾರಿಗಳ ಹುದ್ದೆಗಳಿಗೆ ಗುತ್ತಿಗೆ ಆಧಾರದಡಿ ರೋಸ್ಟರ್ ಮತ್ತು ಮೆರಿಟ್ ಆಧಾರದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಪಟ್ಟಿ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ಆಯ್ಕೆಯಾದ ಅಭ್ಯರ್ಥಿಗಳು ಸೆಪ್ಟೆಂಬರ್ 7 ರಂದು ಬೆಳಗ್ಗೆ 10.30 ರಿಂದ 2ರೊಳಗಾಗಿ ನೇರವಾಗಿ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಗೆ ಖುದ್ದು ಹಾಜರಾಗಿ ಮೂಲ ದಾಖಲಾತಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.



ನನ್ನ ಪುಟ್ಟ ಯುವ ಮಿತ್ರರೇ,
ಈಗ ನೀವೆಲ್ಲರೂ ಒಳ್ಳೆಯ ವಿದ್ಯಾಭ್ಯಾಸ ಮುಗಿಸಿ ನಿಮ್ಮದೇ ಆದ ವೈಯುಕ್ತಿಕ ನೆಲೆಗಟ್ಟನ್ನು ಕಂಡುಕೊಂಡಿದ್ದು ಇದೀಗ ಒಲವಿನ ಸವಿಯನ್ನು ಸವಿಯಲು ಸಾಂಗತ್ಯದ ಹೊಣೆಗಾರಿಕೆಯನ್ನು ನಿಭಾಯಿಸಲು ಇಚ್ಚಿಸುತ್ತಿರುವಿರಿ ಹಾಗೂ ನಿಮ್ಮ ಪಾಲಕರು ನಿಮಗೆ ಇನ್ನಿಲ್ಲದಂತೆ ಸಂಗಾತಿಯನ್ನು ಹುಡುಕುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ ಎಂದರೆ ಖಂಡಿತವಾಗಿಯೂ ನನ್ನ ಈ ಕೆಳಗಿನ ಮಾತುಗಳನ್ನು ಲಕ್ಷ ಕೊಟ್ಟು ಆಲಿಸಿ.

ನೀವು ವಿವಾಹವಾಗುವ ಸಂಗಾತಿಯಲ್ಲಿ ಇರಬೇಕಾದ ಕೆಲವು ಗುಣಗಳನ್ನು ಒಂದು ಅಂದಾಜಿನವರೆಗೆ ನೀವು ಯೋಚಿಸಿಯೇ ಇರುತ್ತೀರಿ ಅಲ್ಲವೇ ಅಕಸ್ಮಾತ್ ಹಾಗೆ ಯೋಚಿಸಿಲ್ಲ ಎನ್ನುವುದಾದರೆ ಇನ್ನು ಮುಂದೆ ಖಂಡಿತವಾಗಿಯೂ ಈ ಕುರಿತು ಗಂಭೀರವಾಗಿ ಯೋಚಿಸಲೇಬೇಕಾದ ಅಗತ್ಯತೆ ಇದೆ. ಈಗಾಗಲೇ ನೀವು ಪ್ರೀತಿ ಪ್ರೇಮದ ಮಧುರ ಸುಳಿಯಲ್ಲಿ ಸಿಲುಕಿದರೆ ನಿಮ್ಮ ಮುಂದೆ ಆಯ್ಕೆಯ ಅವಕಾಶಗಳು ಬಹಳ ಕಮ್ಮಿ, ಅಷ್ಟೇ ಏಕೆ ಅವಕಾಶಗಳೇ ಇಲ್ಲ ಎನ್ನಬಹುದು ಆದರೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗಾತಿಯನ್ನು ಹುಡುಕುತ್ತಾ ಮ್ಯಾಟ್ರಿಮೋನಿ ಸೈಟ್ ಗಳಲ್ಲಿ ತಡಕಾಡುತ್ತಾ ಇದ್ದರೆ ಮುಂದೆ ನೀವಿಬ್ಬರು ಭೇಟಿಯಾದಾಗ ಅವರ ಯಾವ ಗುಣಗಳನ್ನು ನೀವು ಹೆಚ್ಚು ಅರ್ಥವತ್ತಾಗಿ ಗ್ರಹಿಸಬೇಕು ಎಂಬುದಕ್ಕೆ ಕೆಲವು ಸಲಹೆಗಳು ಹೀಗಿವೆ.

ಬಹುತೇಕ ಗಂಡಿರಲಿ, ಹೆಣ್ಣಿರಲಿ ಮುಂದೆ ತಾನು ಜೀವನಪೂರ್ತಿ ಆ ವ್ಯಕ್ತಿಯೊಂದಿಗೆ ಬಾಳಬಲ್ಲೆ ಎಂದು ಊಹಿಸುವ ಸಮಯದಲ್ಲಿಯೂ ಕೂಡ ಮಾತುಕತೆಯ ಸಮಯದಲ್ಲಿ ತನ್ನ ಅತ್ಯಂತ ಉತ್ತಮವಾದ ಸೊ ಕಾಲ್ಡ್ ಫೇರ್ ಪಾರ್ಟನ್ನು ಮಾತ್ರ ತೋರುತ್ತಾನೆ/ಳೆ. ಇಲ್ಲಿ ಅವರಿಗೆ ಒದಗುವ ಅವಕಾಶಗಳಲ್ಲಿ ಹಾಗೆ ನಿಮಗೆ ತೋರಲು ಅವಕಾಶವಿದೆ, ಆದರೆ ಒಬ್ಬ ವ್ಯಕ್ತಿಯ ನಿಜವಾದ ಗುಣದ ಪರಿಚಯವಾಗುವುದು ಊಟದ ಮೇಜಿನ ಮೇಲೆ ಎಂದರೆ ಅಚ್ಚರಿಪಡಬೇಡಿ. ನೀವು ನಿಮ್ಮ ಬದುಕಿನಲ್ಲಿ ಸಂಗಾತಿಯಾಗಿ ಹೊಂದಲು ಬಯಸುವ ವ್ಯಕ್ತಿಯೊಂದಿಗೆ ಒಂದು ಪುಟ್ಟ ಭೇಟಿಯನ್ನು( ಡಿನ್ನರ್ ಡೇಟ್) ಯಾವುದಾದರೂ ಹೋಟೆಲ್ನಲ್ಲಿ ಇಲ್ಲವೇ ರೆಸ್ಟೋರೆಂಟ್ ನಲ್ಲಿ ಕಾಯ್ದಿರಿಸಿ. ಅಲ್ಲಿ ಅವರ ವರ್ತನೆಯ ವಿಧಾನಗಳನ್ನು ಸೂಕ್ಷ್ಮವಾಗಿ ಗಮನಿಸಿ.

ಮೊದಲನೆಯದಾಗಿ ನೀವು ಹೋಗಿರುವ ಹೋಟೆಲ್ ಇಲ್ಲವೇ ರೆಸ್ಟೋರೆಂಟನ ಕೆಲಸಗಾರರನ್ನು ಅವರು ಮಾತನಾಡಿಸುವ ರೀತಿಯನ್ನು ಗಮನಿಸಿ. ನಿಮ್ಮ ಜೊತೆಗಿರುವ ವ್ಯಕ್ತಿ ಅವರನ್ನು ಸೇವಕರಂತೆ ಪರಿಗಣಿಸಿ ಗೌರವಪೂರ್ವಕವಲ್ಲದ ನಡೆಯನ್ನು ತೋರಿದರೆ ಮುಂದೆ ಕೊಂಚ ಸಲುಗೆ ಬೆಳೆದಾಗ ನಿಮ್ಮೊಂದಿಗೆ ಕೂಡ ಅಂತಹದ್ದೇ ವರ್ತನೆಯನ್ನು ಅವರು ತೋರಬಹುದು. ನಾನಿರುವುದೇ ಆಳಲು ಆರಿಸಿಕೊಳ್ಳಲು ಎಂಬ ಅಹಂಭಾವವನ್ನು ಹೊತ್ತ ವ್ಯಕ್ತಿ ಅದು ಗಂಡೇ ಇರಲಿ, ಹೆಣ್ಣೇ ಇರಲಿ ಇತರರೊಂದಿಗೆ ಕೊಂಚ ಕಟುವಾಗಿ, ಸಂವೇದನರಹಿತರಾಗಿ ನಡೆದುಕೊಳ್ಳುತ್ತಾರೆ. ಸಹಜವಾಗಿಯೇ ಒಬ್ಬ ವ್ಯಕ್ತಿಯೊಂದಿಗೆ ಮಾತನಾಡುವಾಗ ಇರಬೇಕಾದ ಸಂವೇದನೆ ಸಹಾನುಭೂತಿ ಹಾಗೂ ಸೂಕ್ಷ್ಮತೆಗಳು ಅವರಿಗೆ ಇಲ್ಲ ಎನ್ನುವುದಾದರೆ ಅಂತಹ ವ್ಯಕ್ತಿ ಮುಂದೆ ನಿಮ್ಮ ಸಂಗಾತಿಯಾಗಿ ಬಂದಾಗಲೂ ಅದೇ ರೀತಿಯ ವರ್ತನೆಯನ್ನು ತೋರುವುದು ಅತ್ಯಂತ ಸಹಜ. ಎಚ್ಚರ ! ನಿಮ್ಮನ್ನು ಭಯಪಡಿಸಲು ಈ ಮಾತನ್ನು ಹೇಳುತ್ತಿಲ್ಲ.

ಬಹುತೇಕ ಜನರು ತಮ್ಮ ಸಂಗಾತಿಯ ಕುರಿತು ಹೇಳುವಾಗ ಈ ಮುಂಚೆ ಅವರು ಹೀಗಿರಲಿಲ್ಲ ಇತ್ತೀಚೆಗೆ ಬದಲಾಗಿದ್ದಾರೆ ಎಂದು ಹೇಳಬಹುದು, ಆದರೆ ನಿಜ ಹೇಳಬೇಕೆಂದರೆ ಯಾವುದೇ ಒಬ್ಬ ವ್ಯಕ್ತಿಯು ತಾನು ಚಿಕ್ಕಂದಿನಿಂದ ಪೋಷಿಸಿಕೊಂಡು ಬಂದ ಗುಣವನ್ನೇ ಬದುಕಿನ ಕೊನೆಯ ಘಟ್ಟದವರೆಗೂ ನಿರ್ವಹಿಸುತ್ತಾನೆ. ತೀವ್ರವಾದ ಆಘಾತಗಳು ಅವರಲ್ಲಿ ಬದಲಾವಣೆಯನ್ನು ತಂದಿರಬಹುದೇ ಹೊರತು ಉಳಿದಂತೆ ಸಸಿಯಾಗಿದ್ದಾಗ ಪೋಷಿಸಿಕೊಂಡು ಬಂದ ಗುಣಾವಗುಣಗಳು ಅವರನ್ನು ಕೊನೆಯವರೆಗೂ ಆಳುತ್ತವೆ. ಇನ್ನು ಜೊತೆಗಿರುವವರ ಇಷ್ಟಾನಿಷ್ಟಗಳನ್ನು ಕೇಳದೆ ತನಗೆ ಬೇಕಾದಂತೆ ಇಬ್ಬರಿಗೂ ಆರ್ಡರ್ ಮಾಡುವ ವ್ಯಕ್ತಿ ಅದು ಗಂಡೇ ಇರಲಿ ಹೆಣ್ಣೇ ಇರಲಿ ತಮ್ಮ ಮುಂದಿನ ಬದುಕಿನಲ್ಲಿಯೂ ತಮ್ಮಿಬ್ಬರ ಕುರಿತ ತೀರ್ಮಾನಗಳನ್ನು ತೆಗೆದುಕೊಳ್ಳುವ ಹಕ್ಕನ್ನು ಕೇವಲ ತಮಗೆ ಮಾತ್ರ ಕಾಯ್ದಿರಿಸಿಕೊಳ್ಳುತ್ತಾರೆ.... ಅವರಿಗೆ ಮತ್ತೊಬ್ಬರ ಭಾವನೆಗಳ ಕುರಿತು ಗೌರವ ಇರುವುದಿಲ್ಲ ಮಾತ್ರವಲ್ಲ, ಆ ಕುರಿತು ಸಂಪೂರ್ಣ ನಿರ್ಲಕ್ಷವೇ ಅವರ ಪ್ರತಿಕ್ರಿಯೆ ಆಗಿರುತ್ತದೆ.

ಮೂರನೆಯದಾಗಿ ಇರುವ ಎಲ್ಲಾ ಅನುಕೂಲತೆಗಳನ್ನು ಬಿಟ್ಟು ಅಲ್ಲಿ ತಮಗೆ ಕಿರಿಕಿರಿಯೆನಿಸುವ ಒಂದೆರಡು ವಿಷಯಗಳನ್ನು ಹಿಡಿದು ಆ ಕುರಿತು ಕಮೆಂಟ್ ಮಾಡುವ, ಬೇಸರ ವ್ಯಕ್ತಪಡಿಸುವ, ಕಿರಿಕಿರಿ ಮಾಡಿಕೊಳ್ಳುವ ವ್ಯಕ್ತಿ ಕೂಡ ತನ್ನ ಮುಂದಿನ ಬದುಕಿನಲ್ಲಿ ಹಾಗೆಯೇ ತನ್ನ ಸಂಗಾತಿಯೊಂದಿಗೆ ನಡೆದುಕೊಳ್ಳುತ್ತಾನೆ. ಹಿಂದಿಯಲ್ಲಿ ಹೇಳುವ ಹಾಗೆ ದೂಸ್ರೋಂಕಿ ಪರವಾ ನಹಿ... ಮೈ ಸಿರ್ಫ್ ಅಪನೀ ಮನ್ ಕಿ ಬಾತ್ ಸುನ್ತಾ ಹೂ, ಕೆಹತಾ ಹೂಂ, ಔರ್ ಕರ್ತಾ ಭಿ ಹೂಂ ಮನೋಭಾವದವರಾಗಿರುತ್ತಾರೆ ಅಂತಹ ವ್ಯಕ್ತಿಯೊಂದಿಗೆ ಬದುಕುವ ಆಸೆ ಯಾರಿಗೆ ಇರುತ್ತದೆ ಹೇಳಿ ಅಕಸ್ಮಾತ್ ಆ ವ್ಯಕ್ತಿ ಎದುರಿಗಿರುವವರು ಏನಾದರೂ ಹೆಚ್ಚುವರಿ ಆರ್ಡರ್ ಮಾಡಿದರೆ ಅರೆ.! ಇದನ್ನು ನಿಮಗೆ ತಿನ್ನಲಿಕ್ಕೆ ಆಗುತ್ತದೆಯೇ? ಈ ಹಿಂದೆ ನಾನು ನೋಡಿದಾಗ ಅಷ್ಟಾಗಿ ರುಚಿ ಸಿಗಲಿಲ್ಲ ಬಹುಶಹ ನಿನಗೂ ಇಷ್ಟವಾಗದೇ ಹೋಗಬಹುದು ಇಷ್ಟೊಂದು ಆರ್ಡರ್ ಏಕೆ ಮಾಡುತ್ತೀರಿ . ತಿನ್ನೋಕೆ ಆಗುತ್ತಾ ಎಂದೆಲ್ಲಾ ಹೇಳುತ್ತಾ ಹೋದರೆ ಆ ವ್ಯಕ್ತಿ ತನ್ನೆಲ್ಲ ಆಸೆ ಆಕಾಂಕ್ಷೆ ಒತ್ತಾಯಗಳನ್ನು ನಿಮ್ಮ ಮೇಲೆ ಹೇರುತ್ತಾನೆಳೆ ಎಂದೇ ಅರ್ಥ.
ಮಕ್ಕಳೇ ಇಲ್ಲಿ ನಾನು ಹೇಳುತ್ತಿರುವುದು ವ್ಯಕ್ತಿಯ ಗುಣದ ಬಗ್ಗೆ ಅದು ಗಂಡೇ ಇರಲಿ ಹೆಣ್ಣೇ ಇರಲಿ ಅವರು ಚಿಕ್ಕಂದಿನಿಂದ ಬೆಳೆಸಿಕೊಂಡು ಬಂದಿರುವ ಗುಣಗಳನ್ನು ಅವರು ಪ್ರದರ್ಶಿಸುತ್ತಾರೆ.

ಮತ್ತೊಬ್ಬರ ಇಷ್ಟಾನಿಷ್ಟ ಗಳನ್ನು ಅರಿಯುವ ಗೋಜಿಗೆ ಹೋಗದ, ತಾವು ಮಾತ್ರ ಸರಿ ಎಂಬ ಭಾವವನ್ನು ಹೊಂದಿರುವ ವ್ಯಕ್ತಿ ಎಲ್ಲದರಲ್ಲೂ ತಪ್ಪನ್ನು ಕಂಡುಹಿಡಿಯುವ ವ್ಯಕ್ತಿ ಎದುರಿಗಿರುವವರ ಕುರಿತು ಸೌಜನ್ಯಕ್ಕೂ ಯೋಚಿಸದ ವ್ಯಕ್ತಿ ಒಳ್ಳೆಯ ಸಂಗಾತಿ ಅಗಲಾರ. ಹಾಗೆಯೇ ಇನ್ನೊಂದು ಮಾತು.... ಪ್ರತಿಯೊಬ್ಬ ಗಂಡು ಹುಡುಗ ತನ್ನ ತಾಯಿಯಂತಹ ಪತ್ನಿಯನ್ನು ಬಯಸುತ್ತಾನೆ. ಆತನ ಪಾಲಿಗೆ ಆತನ ತಾಯಿ ಸೂಪರ್ ವುಮನ್, ತ್ಯಾಗ ಜೀವಿ ಆತನ ಎಲ್ಲಾ ಬೇಡಿಕೆಗಳನ್ನು ಕ್ಷಣಾರ್ಧದಲ್ಲಿ ಈಡೇರಿಸಿ ಆತನ ತಪ್ಪುಗಳನ್ನು ಮನ್ನಿಸಿ ಆತ ಇರುವಂತೆ ಆತನನ್ನು ಸ್ವೀಕರಿಸಿ ಬಿಡುವ ಮಮತಾಮಯಿ ತಾಯಿ... ಆದರೆ ಪ್ರತಿಯೊಬ್ಬ ಹೆಣ್ಣು ಮಕ್ಕಳು ತನ್ನ ತಾಯಿಯಂತೆ ತಾನಾಗುವುದಿಲ್ಲ ಎಂದು ಯೋಚಿಸಿಯೇ ವಿವಾಹದ ಪ್ರಕ್ರಿಯೆಗೆ ಒಪ್ಪಿಗೆ ನೀಡುತ್ತಾಳೆ.... ಏಕೆಂದರೆ ಆಕೆ ತನ್ನ ತಾಯಿಯ ಅಪಾರ ಪರಿಶ್ರಮ, ವಿಶ್ರಾಂತಿ, ಅರಿಯದ ದುಡಿತ, ಯಾರಲ್ಲೂ ಹೇಳಿಕೊಳ್ಳಲಾಗದ ನೋವು, ತಳಮಳ, ಬಿಕ್ಕಳಿಕೆಗಳನ್ನು ಕಂಡಿರುತ್ತಾಳೆ . ಅಷ್ಟಾಗಿಯೂ ಆಕೆಯ ಕುರಿತು ಒಂದು ಬಗೆಯ ನಿರಾಸಕ್ತತೆ, ಪರವಾಗಿಲ್ಲ ನಡೆಯುತ್ತದೆ ಎಂಬ ಅಸಡ್ಡೆಯ ಭಾವವೇ ಹೆಚ್ಚಾಗಿ ತನ್ನ ತಾಯಿಯನ್ನು ನೋಯಿಸಿರುವುದನ್ನು ಆಕೆ ಕಂಡಿರುತ್ತಾಳೆ ಅಂತೆಯೇ ಆಕೆ ಖಂಡಿತವಾಗಿಯೂ ತನ್ನ ತಾಯಿಯ ಪಾತ್ರವನ್ನು ಅದರಲ್ಲೂ ಇಂದಿನ ಆಧುನಿಕ ಜಗತ್ತಿನಲ್ಲಿ ಹೊರಲು ಸಿದ್ಧವಿರುವುದಿಲ್ಲ.

ಈ ಎಲ್ಲಾ ವಿಷಯಗಳನ್ನು ಮನದಟ್ಟು ಮಾಡಿಕೊಂಡು ನಿಮ್ಮಲ್ಲಿ ಕೂಡ ಅಂತಹ ಸಹಾನುಭೂತಿಪರವಲ್ಲದ ನಡವಳಿಕೆಗಳು ಇದ್ದರೆ ಅವುಗಳನ್ನು ತಿದ್ದಿಕೊಳ್ಳಿ. ಹಾ ಹಾಗೆಂದು ಎಲ್ಲವೂ ಒಂದೇ ಬಾರಿಗೆ ಆಗಬೇಕೆಂದಿಲ್ಲ.... ನಿಧಾನವಾಗಿ ನಿಮ್ಮ ವರ್ತನೆಯಲ್ಲಿ ಸೂಕ್ಷ್ಮತೆಗಳನ್ನು ಉತ್ತಮವಾದ ನಡವಳಿಕೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಒಳ್ಳೆಯ ಸಂಗಾತಿಯಾಗುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಿ. ಕೊನೆಯದಾಗಿ ಸಾಂಗತ್ಯ ಎನ್ನುವುದು ಒಂದು ಸುಂದರವಾದ ಜೊತೆಯಾಟ. ಇಲ್ಲಿ ಯಾರು ಪರಸ್ಪರ ವಿರೋಧಿಗಳಲ್ಲ ಇಬ್ಬರು ಪರಸ್ಪರರನ್ನು ಹುರಿದುಂಬಿಸುತ್ತಾ ಪ್ರೀತಿಸುತ್ತಾ ಅವರವರು ಇರುವ ರೀತಿಯಲ್ಲಿಯೇ ಅವರನ್ನು ಒಪ್ಪಿಕೊಳ್ಳುತ್ತಾ ಬದುಕಿನಲ್ಲಿ ಮುಂದೆ ಸಾಗುವ ಬದುಕಿನ ಬಹುದೊಡ್ಡ ಇನ್ನಿಂಗ್ಸ್ ಕಟ್ಟುವ ಜೀವನದ ಸುಮಧುರ ಪಂದ್ಯ.. ಇದರಲ್ಲಿ ನೀವಿಬ್ಬರೂ ಪರಸ್ಪರ ಜೊತೆಯಾಗಿ ಆಡುತ್ತಿರುವಿರಿ ಹೊರತು ವಿರುದ್ಧವಲ್ಲ ಎಂಬುದನ್ನು ಮನದಟ್ಟು ಮಾಡಿಕೊಂಡು ಮುಂದೆ ಸಾಗಿರಿ.

ಈ ರೀತಿಯ ಸಾಂಗತ್ಯದ ಒಳ್ಳೆಯ ಜೊತೆಯಾಟ ಹೊಂದಲು ಪರಸ್ಪರರಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ ಹಾಗೂ ಅವಶ್ಯಕತೆಯ ಸಮಯದಲ್ಲಿ ನೀಡಬಹುದಾದ ಭದ್ರತಾಭಾವ ಬೇಕಾಗುತ್ತದೆ. ಬಹುಶಹ ನಾನು ಹೇಳುವ ಮಾತುಗಳು ನಿಮಗೆ ಔಟ್ ಡೇಟೆಡ್ ಎನ್ನಿಸಬಹುದು..... ಆದರೆ ಇದಕ್ಕಿಂತ ಅಪ ಡೇಟೆಡ್ ಮಾದರಿ ಮತ್ತೊಂದು ಬರಲು ಸಾಧ್ಯವಿಲ್ಲ. ಅಂತಿಮವಾಗಿ ದಾಂಪತ್ಯವು ಮೇಲು-ಕೀಳು, ಹೆಚ್ಚು- ಕಮ್ಮಿ ಯಜಮಾನ-ಸೇವಕ ಭಾವದಲ್ಲಿರದೆ.... ನಾವಿಬ್ಬರೂ ಒಬ್ಬರಿಗೊಬ್ಬರು ಪರಸ್ಪರ ಪೂರಕವಾಗಿ ಬದುಕಬೇಕು ಎಂಬ ಪವಿತ್ರತೆಯ ಸಂಕೇತವಾಗಬೇಕು ಏನಂತೀರಾ ನನ್ನ ಮುದ್ದು ಮಕ್ಕಳೇ



ವೀಣಾ ಹೇಮಂತ್ ಗೌಡ ಪಾಟೀಲ್

# ಕ್ಯಾರೆಟ್ : ಆರೋಗ್ಯದ ಕಾವಲುಗಾರವಾದ ಬಣ್ಣದ ತರಕಾರಿ



ಕಣ್ಣಿನ ಆರೋಗ್ಯದಿಂದ ಹಿಡಿದು ಜೀರ್ಣಕ್ರಿಯೆಯವರೆಗೆ ಹಲವು ರೀತಿಯಲ್ಲಿ ದೇಹಕ್ಕೆ ನೆರವಾಗುವ ಕ್ಯಾರೆಟ್ ನಮ್ಮ ದಿನನಿತ್ಯದ ಆಹಾರದಲ್ಲಿ ತರಕಾರಿಗಳಿಗೆ ವಿಶೇಷ ಸ್ಥಾನವಿದೆ. ದೇಹಕ್ಕೆ ಅಗತ್ಯವಾದ ಜೀವಸತ್ವಗಳು, ಖನಿಜಾಂಶಗಳು, ನಾರಿನಾಂಶ ಹಾಗೂ ವಿವಿಧ ಪೋಷಕಾಂಶಗಳನ್ನು ತರಕಾರಿಗಳು ಒದಗಿಸುತ್ತವೆ. ಅಂತಹ ಪೌಷ್ಟಿಕ ತರಕಾರಿಗಳಲ್ಲಿ ಕ್ಯಾರೆಟ್ ಪ್ರಮುಖವಾದದ್ದು. ಸಾಮಾನ್ಯವಾಗಿ ಕಿತ್ತಳೆ ಬಣ್ಣದಲ್ಲಿ ಕಾಣಿಸುವ ಕ್ಯಾರೆಟ್ ತನ್ನ ವಿಶಿಷ್ಟ ರುಚಿ, ಬಣ್ಣ ಹಾಗೂ ಪೌಷ್ಟಿಕ ಗುಣಗಳಿಂದ ಬಹುತೇಕ ಎಲ್ಲರಿಗೂ ಇಷ್ಟವಾಗುತ್ತದೆ. ಸಲಾಡ್, ಪಲ್ಯ, ಸಾಂಬಾರ್, ಸೂಪ್, ಜ್ಯೂಸ್, ಹಲ್ವಾ ಸೇರಿದಂತೆ ಹಲವು ಬಗೆಯ ಆಹಾರ ಪದಾರ್ಥಗಳಲ್ಲಿ ಕ್ಯಾರೆಟ್ ಬಳಸಲಾಗುತ್ತದೆ.

ಕ್ಯಾರೆಟ್‌ನಲ್ಲಿ ದೇಹಕ್ಕೆ ಅಗತ್ಯವಾದ ಬೀಟಾ-ಕ್ಯಾರೋಟಿನ್, ನಾರಿನಾಂಶ, ಪೊಟ್ಯಾಸಿಯಂ ಹಾಗೂ ಹಲವು ಜೀವಸತ್ವಗಳು ಕಂಡುಬರುತ್ತವೆ. ವಿಶೇಷವಾಗಿ ಬೀಟಾ-ಕ್ಯಾರೋಟಿನ್ ದೇಹದಲ್ಲಿ ವಿಟಮಿನ್ 'ಎ' ಆಗಿ ಪರಿವರ್ತನೆಯಾಗುತ್ತದೆ. ಈ ಕಾರಣದಿಂದ ಕಣ್ಣಿನ ಆರೋಗ್ಯದ ವಿಚಾರದಲ್ಲಿ ಕ್ಯಾರೆಟ್‌ಗೆ ಉತ್ತಮ ಸ್ಥಾನವಿದೆ.

**ಕಣ್ಣಿನ ಆರೋಗ್ಯಕ್ಕೆ ಸಹಕಾರಿ**

ಕ್ಯಾರೆಟ್ ಎಂದಾಕ್ಷಣ ಬಹುತೇಕ ಜನರಿಗೆ ನೆನಪಾಗುವುದು ಕಣ್ಣಿನ ಆರೋಗ್ಯ. ಇದಕ್ಕೆ ಪ್ರಮುಖ ಕಾರಣ ಕ್ಯಾರೆಟ್‌ನಲ್ಲಿರುವ ಬೀಟಾ-ಕ್ಯಾರೋಟಿನ್. ಇದು ದೇಹದಲ್ಲಿ ವಿಟಮಿನ್ 'ಎ'ಯಾಗಿ ಪರಿವರ್ತನೆಯಾಗಲು ಸಹಾಯ ಮಾಡುತ್ತದೆ. ವಿಟಮಿನ್ 'ಎ' ಸಾಮಾನ್ಯ ದೃಷ್ಟಿ ಮತ್ತು ಕಣ್ಣಿನ ಆರೋಗ್ಯಕ್ಕೆ ಅಗತ್ಯವಾದ ಪೋಷಕಾಂಶವಾಗಿದೆ. ಆದರೆ ಕ್ಯಾರೆಟ್ ತಿಂದರೆ ಕಣ್ಣಿನ ದೃಷ್ಟಿ ಎಲ್ಲ ರೀತಿಯಲ್ಲೂ ಹೆಚ್ಚುತ್ತದೆ ಎಂಬುದು ಸರಳೀಕೃತ ಮಾತು. ಪೌಷ್ಟಿಕಾಂಶದ ಕೊರತೆಯಿಂದ ಉಂಟಾಗುವ ಕೆಲವು ಕಣ್ಣಿನ ಸಮಸ್ಯೆಗಳನ್ನು ತಡೆಗಟ್ಟಲು ಸಮತೋಲಿತ ಆಹಾರದಲ್ಲಿ ಕ್ಯಾರೆಟ್ ಸಹಾಯ ಮಾಡಬಹುದು. ಕಣ್ಣಿನ ಆರೋಗ್ಯಕ್ಕಾಗಿ ಕ್ಯಾರೆಟ್ ಜೊತೆಗೆ ಸೊಪ್ಪು, ಹಸಿರು ತರಕಾರಿಗಳು, ಹಣ್ಣುಗಳು ಹಾಗೂ ಇತರ ಪೌಷ್ಟಿಕ ಆಹಾರಗಳನ್ನೂ ಸೇವಿಸುವುದು ಮುಖ್ಯ.

**ದೇಹದ ರೋಗನಿರೋಧಕ ಶಕ್ತಿಗೆ ಬೆಂಬಲ**

ದೇಹದ ಸಾಮಾನ್ಯ ಆರೋಗ್ಯ ಕಾಪಾಡಿಕೊಳ್ಳಲು ವಿವಿಧ ಜೀವಸತ್ವಗಳು ಮತ್ತು ಖನಿಜಾಂಶಗಳು ಅಗತ್ಯ. ಕ್ಯಾರೆಟ್‌ನಲ್ಲಿ ಕಂಡುಬರುವ ಪೋಷಕಾಂಶಗಳು ದೇಹದ ಸಾಮಾನ್ಯ ರೋಗನಿರೋಧಕ ಕಾರ್ಯಕ್ಕೆ ಬೆಂಬಲ ನೀಡುತ್ತವೆ. ಅದರಲ್ಲಿರುವ ಕ್ಯಾರೋಟಿನಾಯ್ಡ್‌ಗಳು ದೇಹದಲ್ಲಿ ಆಕ್ಸಿಡೇಟಿವ್ ಒತ್ತಡವನ್ನು ಕಡಿಮೆ ಮಾಡಲು ಸಹಾಯಕವಾಗುವ ಆಂಟಿಆಕ್ಸಿಡೆಂಟ್ ಗುಣಗಳನ್ನು ಹೊಂದಿವೆ. ಆದರೆ ಯಾವುದೇ ಒಂದು ತರಕಾರಿ ಮಾತ್ರ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಎನ್ನುವುದಕ್ಕಿಂತ, ವಿವಿಧ ಬಗೆಯ ತರಕಾರಿಗಳು, ಹಣ್ಣುಗಳು, ಧಾನ್ಯಗಳು, ಬೇಳೆಕಾಳುಗಳು ಮತ್ತು ಸಮತೋಲಿತ ಆಹಾರ ಒಟ್ಟಾಗಿ ದೇಹದ ಆರೋಗ್ಯಕ್ಕೆ ಉತ್ತಮ ಎಂಬುದನ್ನು ನೆನಪಿನಲ್ಲಿಡಬೇಕು.

**ಜೀರ್ಣಕ್ರಿಯೆಗೆ ನಾರಿನಾಂಶ**

ಕ್ಯಾರೆಟ್‌ನಲ್ಲಿ ನಾರಿನಾಂಶವಿದೆ. ಆಹಾರದಲ್ಲಿನ ನಾರಿನಾಂಶ ಜೀರ್ಣಕ್ರಿಯೆಯ ಸರಿಯಾದ ಕಾರ್ಯಕ್ಕೆ ಸಹಾಯ ಮಾಡುತ್ತದೆ. ಸಮರ್ಪಕ ನಾರಿನಾಂಶ ಹೊಂದಿರುವ ಆಹಾರ ಸೇವಿಸುವುದರಿಂದ ಮಲಬದ್ಧತೆ ಕಡಿಮೆಯಾಗಲು ಸಹಕಾರಿಯಾಗಬಹುದು. ಕ್ಯಾರೆಟ್ ಅನ್ನು ಕಚ್ಚಾ ರೂಪದಲ್ಲಿ ಸಲಾಡ್ ಆಗಿ ಅಥವಾ ಬೇಯಿಸಿ ಸೇವಿಸಬಹುದು. ಸಾಕಷ್ಟು ನೀರು ಕುಡಿಯುವುದರ ಜೊತೆಗೆ ವಿವಿಧ ತರಕಾರಿಗಳು ಮತ್ತು ಹಣ್ಣುಗಳನ್ನು ಆಹಾರದಲ್ಲಿ ಸೇರಿಸಿಕೊಂಡರೆ ಜೀರ್ಣಾಂಗದ ಆರೋಗ್ಯಕ್ಕೂ ಉತ್ತಮ.

**ಹೃದಯದ ಆರೋಗ್ಯದ ದೃಷ್ಟಿಯಿಂದ**

ಆರೋಗ್ಯಕರ ಆಹಾರ ಪದ್ಧತಿಯಲ್ಲಿ ತರಕಾರಿಗಳಿಗೆ ಪ್ರಮುಖ ಸ್ಥಾನವಿದೆ. ಕ್ಯಾರೆಟ್‌ನಲ್ಲಿರುವ ನಾರಿನಾಂಶ ಮತ್ತು ಪೊಟ್ಯಾಸಿಯಂ ಸೇರಿದಂತೆ ಪೋಷಕಾಂಶಗಳು ಒಟ್ಟಾರೆ ಹೃದಯ ಆರೋಗ್ಯಕ್ಕೆ ಅನುಕೂಲಕರವಾದ ಆಹಾರದ ಭಾಗವಾಗಬಹುದು. ಹೃದಯದ ಆರೋಗ್ಯ ಕಾಪಾಡಿಕೊಳ್ಳಲು ಕ್ಯಾರೆಟ್ ಮಾತ್ರ ಸಾಕಾಗುವುದಿಲ್ಲ. ಕಡಿಮೆ ಉಪ್ಪು, ಕಡಿಮೆ ಅತಿಯಾದ ಸ್ಯಾಚುರೇಟೆಡ್ ಕೊಬ್ಬು, ಹೆಚ್ಚು ತರಕಾರಿ-ಹಣ್ಣುಗಳು, ನಿಯಮಿತ ದೈಹಿಕ ಚಟುವಟಿಕೆ ಮತ್ತು ಆರೋಗ್ಯಕರ ಜೀವನಶೈಲಿ ಹೆಚ್ಚು ಮುಖ್ಯ.

**ತೂಕ ನಿಯಂತ್ರಣಕ್ಕೆ ಉತ್ತಮ ಆಯ್ಕೆ**

ತೂಕ ನಿಯಂತ್ರಿಸಲು ಬಯಸುವವರು ತಮ್ಮ ಆಹಾರದಲ್ಲಿ ತರಕಾರಿಗಳನ್ನು ಹೆಚ್ಚಿಸಿಕೊಳ್ಳುವುದು ಸಾಮಾನ್ಯವಾಗಿ ಪ್ರಯೋಜನಕಾರಿ. ಕ್ಯಾರೆಟ್‌ನಲ್ಲಿ ನೀರಿನಾಂಶ ಮತ್ತು ನಾರಿನಾಂಶ ಇರುವುದರಿಂದ ಹೊಟ್ಟೆ ತುಂಬಿದ ಅನುಭವಕ್ಕೆ ಸಹಾಯ ಮಾಡಬಹುದು. ಇದರಿಂದ ಅತಿಯಾಗಿ ತಿಂಡಿ ಸೇವಿಸುವುದನ್ನು ನಿಯಂತ್ರಿಸಲು ಕೆಲವರಿಗೆ ನೆರವಾಗಬಹುದು. ಕ್ಯಾರೆಟ್ ಅನ್ನು ಕಡಿಮೆ ಎಣ್ಣೆಯಲ್ಲಿ ಪಲ್ಯವಾಗಿ, ಸಲಾಡ್ ರೂಪದಲ್ಲಿ ಅಥವಾ ತರಕಾರಿ ಸೂಪ್‌ನಲ್ಲಿ ಬಳಸಬಹುದು. ಆದರೆ ಕ್ಯಾರೆಟ್‌ನಿಂದ ತಯಾರಿಸುವ ಹೆಚ್ಚಿನ ಸಕ್ಕರೆ ಅಥವಾ ತುಪ್ಪ ಹೊಂದಿರುವ ಸಿಹಿ ಪದಾರ್ಥಗಳನ್ನು ಅತಿಯಾಗಿ ಸೇವಿಸುವುದರಿಂದ ಅದರ ಆರೋಗ್ಯ ಪ್ರಯೋಜನ ಕಡಿಮೆಯಾಗಬಹುದು.

**ಚರ್ಮದ ಆರೋಗ್ಯಕ್ಕೂ ಪೋಷಕಾಂಶ**

ಕ್ಯಾರೆಟ್‌ನಲ್ಲಿರುವ ಬೀಟಾ-ಕ್ಯಾರೋಟಿನ್ ಮತ್ತು ಇತರ ಆಂಟಿಆಕ್ಸಿಡೆಂಟ್‌ಗಳು ದೇಹದ ಕೋಶಗಳನ್ನು ಆಕ್ಸಿಡೇಟಿವ್ ಹಾನಿಯಿಂದ ರಕ್ಷಿಸುವ ಪ್ರಕ್ರಿಯೆಗೆ ಸಹಾಯ ಮಾಡುತ್ತವೆ. ಆರೋಗ್ಯಕರ ಚರ್ಮಕ್ಕಾಗಿ ಪೌಷ್ಟಿಕ ಆಹಾರ ಮುಖ್ಯವಾಗಿದ್ದು, ಕ್ಯಾರೆಟ್ ಅಂತಹ ಆಹಾರದ ಒಂದು ಭಾಗವಾಗಬಹುದು. ಚರ್ಮದ ಸೌಂದರ್ಯಕ್ಕಾಗಿ ಕೇವಲ ಕ್ಯಾರೆಟ ತಿನ್ನುವುದರ ಮೇಲೆ ಅವಲಂಬಿಸುವ ಬದಲು ಸಾಕಷ್ಟು ನೀರು ಕುಡಿಯುವುದು, ಹಣ್ಣು-ತರಕಾರಿ ಸೇವಿಸುವುದು, ಉತ್ತಮ ನಿದ್ರೆ ಮತ್ತು ಆರೋಗ್ಯಕರ ಜೀವನಶೈಲಿಯನ್ನು ಅನುಸರಿಸುವುದು ಮುಖ್ಯ.

**ಮಕ್ಕಳ ಆಹಾರದಲ್ಲೂ ಕ್ಯಾರೆಟ್**

ಮಕ್ಕಳಿಗೆ ತರಕಾರಿಗಳನ್ನು ತಿನ್ನಿಸುವುದು ಕೆಲವೊಮ್ಮೆ ಪೋಷಕರಿಗೆ ಸವಾಲಾಗುತ್ತದೆ. ಕ್ಯಾರೆಟ್‌ನ ನೈಸರ್ಗಿಕ ಸಿಹಿ ರುಚಿ ಮತ್ತು ಆಕರ್ಷಕ ಬಣ್ಣದಿಂದ ಮಕ್ಕಳಿಗೆ ಇದನ್ನು ಆಹಾರದಲ್ಲಿ ಸೇರಿಸುವುದು ಸುಲಭವಾಗಬಹುದ. ಕ್ಯಾರೆಟ್ ಅನ್ನು ಬೇಯಿಸಿ ಮೃದುವಾಗಿ ಮಾಡಿ, ವಿವಿಧ ತರಕಾರಿಗಳೊಂದಿಗೆ ಪಲ್ಯ, ಸೂಪ್ ಅಥ-'ವಾ ಇತರ ಮನೆಯ ಆಹಾರಗಳಲ್ಲಿ ಸೇರಿಸಬಹುದು. ಚಿಕ್ಕ ಮಕ್ಕಳಿಗೆ ಕಚ್ಚಾ ಕ್ಯಾರೆಟ್ ನೀಡುವಾಗ ಉಸಿರುಗಟ್ಟುವ ಅಪಾಯ ಇರುವುದರಿಂದ ವಯಸ್ಸಿಗೆ ತಕ್ಕಂತೆ ಸುರಕ್ಷಿತ ಗಾತ್ರ ಮತ್ತು ಮೃದುವಾದ ರೂಪದಲ್ಲಿ ನೀಡುವುದು ಮುಖ್ಯ.

**ಕ್ಯಾರೆಟ್ ಸೇವಿಸುವ ಉತ್ತಮ ವಿಧಾನ ಯಾವುದು**

ಕ್ಯಾರೆಟ್ ಅನ್ನು ಕಚ್ಚಾ, ಬೇಯಿಸಿ, ಆವಿಯಲ್ಲಿ ಬೇಯಿಸಿ ಅಥ-'ವಾ ವಿವಿಧ ಆಹಾರ ಪದಾರ್ಥಗಳಲ್ಲಿ ಸೇರಿಸಿ ಸೇವಿಸಬಹುದು. ಕ್ಯಾರೆಟ್‌ನಲ್ಲಿರುವ ಕೆಲವು ಪೋಷಕಾಂಶಗಳನ್ನು ದೇಹ ಹೀರಿಕೊಳ್ಳಲು ಸ್ವಲ್ಪ ಆರೋಗ್ಯಕರ ಕೊಬ್ಬಿನೊಂದಿಗೆ ಸೇವಿಸುವುದು ಸಹಾಯಕವಾಗಬಹುದು. ಸಲಾಡ್‌ನಲ್ಲಿ ಕ್ಯಾರೆಟ್ ಜೊತೆಗೆ ಸೌತೆಕಾಯಿ, ಟೊಮ್ಯಾಟೊ, ಬೀಟ್‌ರೂಟ್ ಮುಂತಾದ ತರಕಾರಿಗಳನ್ನು ಸೇರಿಸಬಹುದು. ಸೂಪ್, ಸಾಂಬಾರ್, ಪಲ್ಯ, ಉಪ್ಮಾ, ಪೊಂಗಲ್ ಅಥವಾ ಇತರ ಮನೆಯ ಅಡುಗೆಯಲ್ಲಿಯೂ ಕ್ಯಾರೆಟ್ ಬಳಸಬಹುದು.

**ಕ್ಯಾರೆಟ್ ಜ್ಯೂಸ್ ಬಗ್ಗೆ** ಕ್ಯಾರೆಟ್ ಜ್ಯೂಸ್ ಕೂಡ ಜನಪ್ರಿಯವಾಗಿದೆ. ಆದರೆ ಸಂಪೂರ್ಣ ಕ್ಯಾರೆಟ್‌ನಲ್ಲಿ ಇರುವ ನಾರಿನಾಂಶ ಜ್ಯೂಸ್ ಮಾಡುವಾಗ ಕಡಿಮೆಯಾಗಬಹುದು. ಆದ್ದರಿಂದ ಪ್ರತಿದಿನ ಕೇವಲ ಜ್ಯೂಸ್ ಕುಡಿಯುವುದಕ್ಕಿಂತ ಸಂಪೂರ್ಣ ಕ್ಯಾರೆಟ್‌ನ್ನು ಆಹಾರದ ಭಾಗವಾಗಿ ಸೇವಿಸುವುದು ಉತ್ತಮ ಆಯ್ಕೆಯಾಗಬಹುದು. ಜ್ಯೂಸ್‌ಗೆ ಹೆಚ್ಚುವರಿ ಸಕ್ಕರೆ ಸೇರಿಸುವುದನ್ನು ತಪ್ಪಿಸುವುದು ಒಳಿತು. ಮಧುಮೇಹ ಅಥವಾ ಇತರ ಆರೋಗ್ಯ ಸಮಸ್ಯೆ ಇರುವವರು ಜ್ಯೂಸ್‌ನ್ನು ಹೆಚ್ಚಿನ ಪ್ರಮಾಣದಲ್ಲಿ ಸೇವಿಸುವ ಮೊದಲು ತಮ್ಮ ಆಹಾರ ಪದ್ಧತಿಗೆ ಅನುಗುಣವಾಗಿ ವೈದ್ಯರು ಅಥ-'ವಾ ಪೌಷ್ಟಿಕ ತಜ್ಞರ ಸಲಹೆ ಪಡೆಯಬಹುದು.

**ಕ್ಯಾರೆಟ್‌ನ ವಿವಿಧ ಬಣ್ಣಗಳು**

ಕ್ಯಾರೆಟ್ ಎಂದರೆ ಕಿತ್ತಳೆ ಬಣ್ಣ ಮಾತ್ರ ಎಂದು ಭಾವಿಸುವುದು ಸಹಜ. ಆದರೆ ಜಗತ್ತಿನ ವಿವಿಧ ಭಾಗಗಳಲ್ಲಿ ಬಿಳಿ, ಹಳದಿ, ಕೆಂಪು, ನೇರಳೆ ಸೇರಿದಂತೆ ವಿವಿಧ ಬಣ್ಣಗಳ ಕ್ಯಾರೆಟ್‌ಗಳೂ ಬೆಳೆಯುತ್ತವೆ. ಅವುಗಳಲ್ಲಿ ಕಂಡುಬರುವ ಸಸ್ಯ ವರ್ಣದ್ರವ್ಯಗಳು ಮತ್ತು ಆಂಟಿಆಕ್ಸಿಡೆಂಟ್‌ಗಳ ಪ್ರಮಾಣದಲ್ಲಿ ವ್ಯತ್ಯಾಸವಿರಬಹುದು. ಹೀಗಾಗಿ ಆಹಾರದಲ್ಲಿ ವಿವಿಧ ಬಣ್ಣದ ತರಕಾರಿಗಳನ್ನು ಸೇರಿಸಿಕೊಳ್ಳುವುದು ದೇಹಕ್ಕೆ ವಿಭಿನ್ನ ಬಗೆಯ ಸಸ್ಯಪೋಷಕಾಂಶಗಳನ್ನು ಪಡೆಯಲು ಸಹಾಯಕವಾಗುತ್ತದೆ.

**ಕ್ಯಾರೆಟ್ ಬೆಳೆ ಮತ್ತು ರೈತರಿಗೆ ಅವಕಾಶ**

ಕ್ಯಾರೆಟ್ ಒಂದು ಪ್ರಮುಖ ಬೇರು ತರಕಾರಿ. ಸೂಕ್ತ ಹವಾಮಾನ, ಮಣ್ಣಿನ ಗುಣಮಟ್ಟ, ನೀರಾವರಿ ಮತ್ತು ಉತ್ತಮ ಕೃಷಿ ನಿರ್ವಹಣೆ ದೊರೆತರೆ ರೈತರು ಕ್ಯಾರೆಟ್ ಬೆಳೆ ಬೆಳೆಸಬಹುದು. ಮಣ್ಣು ಸಡಿಲವಾಗಿದ್ದು ಉತ್ತಮ ನೀರು ಬಸಿದು ಹೋಗುವಂತಿದ್ದರೆ ಬೇರು ಉತ್ತಮವಾಗಿ ಬೆಳೆಯಲು ಅನುಕೂಲವಾಗುತ್ತದೆ. ಉತ್ತಮ ಗುಣಮಟ್ಟದ ಬೀಜ ಆಯ್ಕೆ, ಸರಿಯಾದ ಬಿತ್ತನೆ ಅಂತರ, ಸಮರ್ಪಕ ನೀರಾವರಿ, ಕಳೆ ನಿಯಂತ್ರಣ ಮತ್ತು ಕೀಟ-ರೋಗ ನಿರ್ವಹಣೆ ಕ್ಯಾರೆಟ್ ಬೆಳೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಮಾರುಕಟ್ಟೆಯ ಬೇಡಿಕೆಯನ್ನು ಗಮನಿಸಿ ಬೆಳೆ ಬೆಳೆಯುವುದರಿಂದ ರೈತರಿಗೆ ಉತ್ತಮ ಆದಾಯದ ಅವಕಾಶವೂ ಸಿಗಬಹುದು.

**ಕ್ಯಾರೆಟ್ ಖರೀದಿಸುವಾಗ ಗಮನಿಸಬೇಕಾದ ಅಂಶಗಳು**

ಮಾರುಕಟ್ಟೆಯಲ್ಲಿ ಕ್ಯಾರೆಟ್ ಖರೀದಿಸುವಾಗ ಗಟ್ಟಿಯಾಗಿರುವ, ತಾಜಾ ಮತ್ತು ಕೊಳೆತ ಕಲೆಗಳಿಲ್ಲದ ಕ್ಯಾರೆಟ್‌ಗಳನ್ನು ಆಯ್ಕೆ ಮಾಡುವುದು ಉತ್ತಮ. ತುಂಬಾ ಮೃದುವಾಗಿರುವ ಅಥವಾ ಹಾಳಾಗಿರುವ ಕ್ಯಾರೆಟ್‌ಗಳನ್ನು ತಪ್ಪಿಸುವುದು ಒಳಿತು. ಮನೆಗೆ ತಂದ ನಂತರ ಸ್ವಚ್ಛವಾಗಿ ತೊಳೆದು, ಅಗತ್ಯವಿದ್ದರೆ ಸಿಪ್ಪೆ ತೆಗೆದು ಬಳಸಬಹುದು. ಕಚ್ಚಾ ಸೇವಿಸುವುದಾದರೆ ಹರಿಯುವ ನೀರಿನಲ್ಲಿ ಚೆನ್ನಾಗಿ ತೊಳೆಯುವುದು ಮುಖ್ಯ.

**ಅತಿಯಾದ ಸೇವನೆ ಬೇಡ**

ಕ್ಯಾರೆಟ್ ಆರೋಗ್ಯಕರ ತರಕಾರಿಯಾದರೂ ಯಾವುದೇ ಆಹಾರವನ್ನು ಅತಿಯಾಗಿ ಸೇವಿ ಸುವುದು ಸೂಕ್ತವಲ್ಲ. ತುಂಬಾ ಹೆಚ್ಚಿನ ಪ್ರಮಾಣದಲ್ಲಿ ಕ್ಯಾರೆಟ್ ಅಥವಾ ಬೀಟಾ-ಕ್ಯಾರೋಟಿನ್‌ಯುಕ್ತ ಆಹಾರವನ್ನು ದೀರ್ಘಕಾಲ ಅತಿಯಾಗಿ ಸೇವಿಸಿದರೆ ಚರ್ಮದಲ್ಲಿ ಹಳದಿ-ಕಿತ್ತಳೆ ಬಣ್ಣದ ಬದಲಾವಣೆ ಕಾಣಿಸಿಕೊಳ್ಳಬಹುದು. ಸಾಮಾನ್ಯವಾಗಿ ಇದು ಹಾನಿಕಾರಕವಲ್ಲ ಮತ್ತು ಸೇವನೆಯನ್ನು ಕಡಿಮೆ ಮಾಡಿದ ನಂತರ ಬಣ್ಣ ಸಾಮಾನ್ಯವಾಗುತ್ತದೆ. ಆದರೆ ದೇಹದಲ್ಲಿ ಕಾಣಿಸಿಕೊಳ್ಳುವ ಯಾವುದೇ ಅಸಾಮಾನ್ಯ ಬದಲಾವಣೆಯನ್ನು ಕೇವಲ ಆಹಾರದ ಪರಿಣಾಮ ಎಂದು ನಿರ್ಧರಿಸದೆ, ಅಗತ್ಯವಿದ್ದರೆ ವೈದ್ಯರನ್ನು ಸಂಪರ್ಕಿಸುವುದು ಉತ್ತಮ.

**ಕ್ಯಾರೆಟ್ ಸರಳ ತರಕಾರಿ, ದೊಡ್ಡ ಪೌಷ್ಟಿಕ ಮೌಲ್ಯ**

ನಮ್ಮ ಅಡುಗೆಮನೆಯಲ್ಲಿ ಸುಲಭವಾಗಿ ದೊರೆಯುವ ಕ್ಯಾರೆಟ್ ಒಂದು ಸಾಮಾನ್ಯ ತರಕಾರಿಯಂತೆ ಕಾಣಿಸಿದರೂ, ಅದರೊಳಗೆ ಹಲವು ಪೋಷಕಾಂಶಗಳಿವೆ. ಕಣ್ಣಿನ ಸಾಮಾನ್ಯ ಆರೋಗ್ಯಕ್ಕೆ ಅಗತ್ಯವಾದ ವಿಟಮಿನ್ 'ಎ'ಯ ಪೂರ್ವಗಾಮಿ ಬೀಟಾ-ಕ್ಯಾರೋಟಿನ್, ನಾರಿನಾಂಶ ಮತ್ತು ಇತರ ಪೋಷಕಾಂಶಗಳನ್ನು ಇದು ಒದಗಿಸುತ್ತದೆ. ಆರೋಗ್ಯಕರ ಜೀವನಕ್ಕೆ ಒಂದೇ ಒಂದು ಆಹಾರವನ್ನು 'ಅದ್ಭುತ ಔಷಧಿ' ಎಂದು ನೋಡುವ ಬದಲು, ವಿವಿಧ ತರಕಾರಿಗಳು, ಹಣ್ಣುಗಳು, ಬೇಳೆಕಾಳುಗಳು, ಧಾನ್ಯಗಳು ಮತ್ತು ಅಗತ್ಯ ಪ್ರೋಟೀನ್‌ಗಳನ್ನು ಒಳಗೊಂಡ ಸಮತೋಲಿತ ಆಹಾರ ಪದ್ಧತಿಯನ್ನು ಅನುಸರಿಸುವುದು ಅತ್ಯುತ್ತಮ ಮಾರ್ಗ. ಆ ಸಮತೋಲಿತ ಆಹಾರದಲ್ಲಿ ಕ್ಯಾರೆಟ್‌ಗೆ ಖಂಡಿತವಾಗಿಯೂ ಒಂದು ಉತ್ತಮ ಸ್ಥಾನವಿದೆ. "ಬಣ್ಣ ಬಣ್ಣದ ತರಕಾರಿಗಳು?ಪೌಷ್ಟಿಕ ಆಹಾರದ ಗುರುತು; ಕ್ಯಾರೆಟ್?ಅದರಲ್ಲೊಂದು ಆರೋಗ್ಯಕರ ಆಯ್ಕೆ."

ವಿನಾಯಕ ಬಿ. ತಿಪ್ಪಣ್ಣನವರ

1ನೇ ಪುಟದಿಂದ....

## ಸಂಸ್ಕೃತಿ-ಪರಂಪರೆ ಉಳಿಸುವಲ್ಲಿ ಉತ್ಸವಗಳ ಪಾತ್ರ ಮಹತ್ವದ್ದು ಭಕ್ತಿ-ಶ್ರದ್ಧೆಯಿಂದ ಜರುಗಿದ 16ನೇ ನೀಲಕಂಠೇಶ್ವರ ಉತ್ಸವ

ಪಾತ್ರ ವಹಿಸುತ್ತವೆ. ಮಹಿಳೆಯರು ಉಳಿತಾಯದ ಹಣವನ್ನು ಮನೆಯಲ್ಲಿ ಡಬ್ಬಿಗಳಲ್ಲಿ ಸಂಗ್ರಹಿಸುವ ಬದಲು, ನೋಂದಾಯಿತ ಮ್ಯೂಚುವಲ್ ಫಂಡ್‌ಗಳಂತಹ ಸುರಕ್ಷಿತ ಹೂಡಿಕೆ ಮಾರ್ಗಗಳಲ್ಲಿ ತೊಡಗಿಸಿದರೆ, ಅದು ಭವಿಷ್ಯದ ಜೀವನಕ್ಕೆ ಆರ್ಥಿಕ ಭದ್ರತೆಯ ದಾರಿದೀಪವಾಗಲಿದೆ. ಮಕ್ಕಳಿಗೆ ಉನ್ನತ ವ್ಯಾಸಂಗ ಕೊಡಿಸುವತ್ತ ಪಾಲಕರು ಅಣಿಗೊಳ್ಳಬೇಕು, ಮಕ್ಕಳು ಮುಪ್ಪಾವಸ್ಥೆಯಲ್ಲಿ ಪಾಲಕರನ್ನು ಜೋಪಾನ ಮಾಡುವ ಸಂಸ್ಕೃತಿಯನ್ನು ಬೆಳಸಿಕೊಳ್ಳಬೇಕು,ದುಡಿಯುವ ಸಂದರ್ಭದಲ್ಲಿ ದುಂದುವೆಚ್ಚ ಮಾಡದೇ ಹಣದ ಉಳಿತಾಯ ಮಾಡಿ ವೃದ್ಧಾಪ್ಯದಲ್ಲಿ ಸಹಕಾರಿಯಾಗುತ್ತದೆ ಎಂದರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕಾ ಅಧ್ಯಕ್ಷ ಪ್ರಬಣ್ಣ ಚವಡಿ. ಕುರುಹಿನಶೆಟ್ಟಿ ಸಮಾಜ ಚಿಕ್ಕದಾದರೂ ಒಗ್ಗಟ್ಟಿನಿಂದ ಬೆಳೆಯುತ್ತಿದೆ. ದೊಡ್ಡ ಸಮಾಜಗಳಿಗೆ ಮಾದರಿಯಾಗುವಂತಹ ಕೆಲಸ ಮಾಡುತ್ತಾ ಪ್ರಗತಿ ಹೊಂದುತ್ತಿರುವದು ಸಂತಸದ ವಿಷಯ ಎಂದರು. ನೇಕಾರ ಸೊಸೈಟಿ ಅಧ್ಯಕ್ಷ ಅಶೋಕ ವನ್ನಾಲ ಮಾತನಾಡಿ.ಬಡತನ ನಿರ್ಮೂಲನೆಗೆ ಒಳ್ಳೆಯ ಆಯುಧ ಶಿಕ್ಷಣ, ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಉತ್ತಮ ಪ್ರಜೆಗಳನ್ನಾಗಿಸಿ,ಬಡವನಾಗಿ ಹುಟ್ಟುವುದು ತಪ್ಪಲ್ಲ ಆದರೆ ಬಡವನಾಗಿ ಸಾಯುವದು ತಪ್ಪು ಅದು ನಿಮ್ಮ ದೌರ್ಬಲ್ಯವಾಗಬಾರದು ಆದ್ದರಿಂದ ನೀವೂ ಮಕ್ಕಳಿಗೆ ಉತ್ತಮ ವಿಧ್ಯೆ ನೀಡಿ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಸ್.ಎಸ್.ಡೊಳ್ಳಿನ ಮಾತನಾಡಿದರು.ನಮ್ಮ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಉತ್ತಮ ಶಿಕ್ಷಣ ಸಂಸ್ಥೆಯನ್ನು ಕಟ್ಟುವ ಸಂಕಲ್ಪವನ್ನು ಸಮಸ್ತ ಕುರುಹಿನಶೆಟ್ಟಿ ಸಮಾಜ ಭಾಂದವರು ಮಾಡಬೇಕು. ನಂಬಿಕೆ ವಿಶ್ವಾಸವಿಟ್ಟು ಸಂಕಲ್ಪ ತೊಟ್ಟರೆ ಎಲ್ಲವು ಸಾಧ್ಯ ಎಂದರು. ಮುಖ್ಯ ಅತಿಥಿಗಳಾಗಿ ಶ್ರೀಧರ ಬಿದರಳ್ಳಿ, ರಾಘವೇಂದ್ರ ಮಂತಾ, ನಿಂಗಪ್ಪ ಸಮಗಂಡಿ, ಜಗದೀಶ ಕವಡಿಮಟ್ಟಿ, ಅಶೋಕ ವನ್ನಾಲ, ಮುದಕಪ್ಪ ಬುಟ್ಟಾನವರ, ಶಂಕ್ರಪ್ಪ ಕೆಂಬಾವಿ, ದೇವೇಂದ್ರಪ್ಪ ಬನಿಕಲ್, ಚನ್ನು ಸಮಗಂಡಿ, ವಿಜಯಕುಮಾರ ಮಾಳಗಿ, ಶ್ರೀನಿವಾಸ ವನ್ನಾಲ, ಸುಜಯ ಪಸಾರದ, ವಿಶ್ವನಾಥ ಮಾಳಗಿ , ಅನಿತಾ ಮಾಳಗಿ, ಲಕ್ಷ್ಮಣ ಗಣಪಾ, ಈರಪ್ಪ ಸಂಕನೂರ, ವೆಂಕಪ್ಪ ಕುದರಿ, ಕೃಷ್ಣಪ್ಪ ಶ್ಯಾವಿ, ಪ್ರಭಾಕರ ಕವಡಿಮಟ್ಟಿ, ರುದ್ರಪ್ಪ ಸೂಡಿ, ಮಹಿಳಾ ಘಟಕದ ಅಧ್ಯಕ್ಷೆ ರೇಖಾ ವನ್ನಾಲ ಸೇರಿದಂತೆ ಸಮಾಜದ ಗಣ್ಯರು, ಮುಖಂಡರು ಹಾಗೂ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಯಲಬುರ್ಗಾ ರಾಯರ ಆರಾಧನೆಯಲ್ಲಿ ಗಂಗಾವತಿ ಕಲಾವಿದರ ಸಂಗೀತ ಸೇವೆ : ರಿಜ್ವಾನ್ ಮುದ್ದಾಬಳ್ಳಿ ತಂಡದಿಂದ ದಾಸವಾಣಿ

ಯಲಬುರ್ಗಾ: ಪಟ್ಟಣದ ಶ್ರೀ ರಾಘವೇಂದ್ರಸ್ವಾಮಿ ಮಠದಲ್ಲಿ ಆಯೋಜಿಸಿದ್ದ ಶ್ರೀ ಗುರು ರಾಘವೇಂದ್ರಸ್ವಾಮಿಗಳ 355ನೇ ಆರಾಧನಾ ಮಹೋತ್ಸವದಲ್ಲಿ ಗಂಗಾವತಿಯ ಶ್ರೀ ಪುಟ್ಟರಾಜ ಕವಿ ಗವಾಯಿಗಳ ಸಂಗೀತ ಪಾಠ ಶಾಲೆಯ ಮುಖ್ಯಸ್ಥ ಮಹ್ಮದ್ ರಿಜ್ವಾನ್ ಮುದ್ದಾಬಳ್ಳಿ ತಂಡದವರಿಂದ ದಾಸವಾಣಿ ಸಂಗೀತ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.



ಸೋಮವಾರ ಉತ್ತರಾರಾಧನೆ ಪ್ರಯುಕ್ತ ಸಂಜೆ ದಾಸವಾಣಿ ಕಾರ್ಯಕ್ರಮದಲ್ಲಿ ಮಹ್ಮದ್ ರಿಜ್ವಾನ್ ತಂಡದ ಯುವ ಕಲಾವಿದರು, ವಿದ್ಯಾರ್ಥಿಗಳು ಸುಮಾರು ಎರಡು ಗಂಟೆಗಳ ಕಾಲ ದಾಸವಾಣಿ ಸಂಗೀತ ಸೇವೆ ನಡೆಸಿಕೊಟ್ಟರು. ನೂರಾರು ಭಕ್ತರು ದಾಸವಾಣಿ ಆಲಿಸಿದರು. ನಂತರ ಶ್ರೀಮಠದ ಸಮಿತಿ ಅಧ್ಯಕ್ಷ ಸುನಿಲ್ ಕುಲಕರ್ಣಿ, ಅರ್ಚಕ ಗುರುರಾಜಾಚಾರ, ಮಹಿಳಾ ಪ್ರಮುಖರಾದ ಸಂತೋಷಿಮಾ ಜೋಶಿ, ಸ್ನೇಹಾ ಜೋಶಿ ಮತ್ತಿತರರು ಕಲಾವಿದರಿಗೆ ಅಭಿನಂದಿಸಿ ಗೌರವ ಸಲ್ಲಿಸಿದರು. ಅರ್ಚಕರು ಕಲಾವಿದರಿಗೆ ರಾಯರ ಫಲ, ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು. ನಾರಾಯಣ ಗಂಗಾಖೇಡ ಅವರು ಕಾರ್ಯಕ್ರಮ ನಿರ್ವಹಿಸಿದರು. ದಾಸವಾಣಿ ಸಂಗೀತ ಸೇವೆಯಲ್ಲಿ ಸಂಗೀತ ಪಾಠ ಶಾಲೆಯ ಅಧ್ಯಕ್ಷ ರಾಜಾಸಾಬ್ ಮುದ್ದಾಬಳ್ಳಿ, ಮಹ್ಮದ್ ರಿಜ್ವಾನ್ ಅವರು ತಬಲಾ ಸಾತ್ ನೀಡಿದರು. ಯುವರಾಜ ಕುರುಗೋಡ ಹಾರ್ಮೋನಿಯಂ ಸಾತ್ ನೀಡಿದರೆ, ಶಿವಕುಮಾರ ಫ್ಲೂಟ್ ವಾದನ, ಸೋಮಶೇಖರ ತಾಳ ವಾದನ ಮಾಡಿದರು. ಸಂಗೀತ ಪಾಠಶಾಲೆಯ ಕಲಾವಿದ ವಿದ್ಯಾರ್ಥಿಗಳಾದ ಶ್ರೀದೇವಿ ಪಾಟೀಲ್, ರಾಜೇಶ್ವರಿ ಹಿರೇಮನಿ, ಸ್ವಾತಿ ಕುಷ್ಟಗಿ, ಮೇಘರಾಜೇಶ್ವರಿ, ಅರ್ಪಿತಾ, ಸುಮೇಧಾ ಕುಲಕರ್ಣಿ, ಅಭಿಜ್ಞಾ ಗುಡೂರು ಅವರುಗಳು ಸಂಗೀತ ಸೇವೆ ಸಲ್ಲಿಸಿದರು.

## ದೊಡ್ಡಬಳ್ಳಾಪುರ : ಎಕ್ಸ್‌ಪ್ರೆಸ್ ರೈಲಿಗೆ ಸಿಲುಕಿ ಮಗು ಹಾಗೂ ಇಬ್ಬರು ಮಹಿಳೆಯರ ದುರ್ಮರಣ

ದೊಡ್ಡಬಳ್ಳಾಪುರ: ರೈಲ್ವೆ ಹಳಿಯ ಮೇಲೆ ಸಾಗುತ್ತಿದ್ದ ಇಬ್ಬರು ಮಹಿಳೆಯರು ಹಾಗೂ ಒಂದು ಮಗು ಎಕ್ಸ್‌ಪ್ರೆಸ್ ರೈಲಿಗೆ ಸಿಲುಕಿ ಸ್ಥಳದಲ್ಲೇ ಮೃತಪಟ್ಟಿರುವ ಹೃದಯವಿದ್ರಾವಕ ಘಟನೆ ಸೋಮವಾರ ಬೆಳ್ಳಂಬೆಳಗ್ಗೆ ನಡೆದಿದೆ.ದೊಡ್ಡಬಳ್ಳಾಪುರ ರೈಲ್ವೆ ನಿಲ್ದಾಣ ಹಾಗೂ ಮುತ್ತೂರು ನಡುವಿನ ರೈಲ್ವೆ ಹಳಿಯಲ್ಲಿ ಈ ದುರ್ಘಟನೆ ಸಂಭವಿಸಿದ್ದು, ಮೃತರ ಹೆಸರು ಮತ್ತು ವಿಳಾಸ ಇನ್ನೂ ಪತ್ತೆಯಾಗಿಲ್ಲ.



ಮುತ್ತೂರು ಕಡೆಯಿಂದ ರೈಲಿನಲ್ಲಿ ಪ್ರಯಾಣಿಸಲು ರೈಲ್ವೆ ನಿಲ್ದಾಣದತ್ತ ಹಳಿಯ ಮೇಲೆಯೇ ನಡೆದುಕೊಂಡು ಬರುತ್ತಿದ್ದ ಸಂದರ್ಭದಲ್ಲಿ ಈ ಅವಘಡ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ. ಎರಡು ಹಳಿಗಳಿರುವ ಈ ಪ್ರದೇಶದಲ್ಲಿ ತಿರುವು ಇದ್ದು, ರೈಲು ಯಾವ ಹಳಿಯಲ್ಲಿ ಬರುತ್ತಿದೆ ಎಂಬುದು ತಿಳಿಯದೆ ಮಹಿಳೆಯರು ಮತ್ತು ಮಗು ರೈಲಿಗೆ ಸಿಲುಕಿರಬಹುದು ಎನ್ನಲಾಗಿದೆ. ಆದರೆ, ಅಪಘಾತಕ್ಕೆ ನಿಖರ ಕಾರಣವೇನು ಎಂಬುದು ರೈಲ್ವೆ ಪೊಲೀಸರ ತನಿಖೆಯಿಂದಷ್ಟೇ ತಿಳಿದುಬರಬೇಕಿದೆ. ಎಕ್ಸ್‌ಪ್ರೆಸ್ ರೈಲು ಡಿಕ್ಕಿ ಹೊಡೆದ ರಭಸಕ್ಕೆ ಮೂವರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆ ಕುರಿತು ಮಾಹಿತಿ ತಿಳಿಯುತ್ತಿದ್ದಂತೆ ರೈಲ್ವೆ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸುತ್ತಿದ್ದು, ಮೃತರ ಗುರುತು ಪತ್ತೆಹಚ್ಚಲು ಕ್ರಮ ಕೈಗೊಂಡಿದ್ದಾರೆ.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಪ್ರಜಾಸೇವಾ ಅಭಿಯಾನ ಪ್ರಮುಖ ಅಂಶಗಳು ಹಾಗೂ ಪರಿಶೀಲನಾ ಕಾರ್ಯವಿಧಾನ

ಗದಗ: ಸಾರ್ವಜನಿಕರು ಈ ಹಿಂದೆ ಸರ್ಕಾರದ ಸೇವೆಗಳನ್ನು ಪಡೆಯಲು ಸಾಧ್ಯವಾಗದೇ ಇದ್ದಾಗ ಅಥ-ವಾ ಯೋಜನೆಯ ಪ್ರಯೋಜನಗಳು ತಲುಪದೇ ಇದ್ದ ಸಂದರ್ಭದಲ್ಲಿ ಕುಂದುಕೊರತೆಯನ್ನು ಅಧಿಕಾರಿಗಳ/ ಜನಪ್ರತಿನಿಧಿಗಳ ಬಳಿ ಹೇಳಿಕೊಂಡು ಅದಕ್ಕೆ ಪರಿಹಾರ ಕಂಡುಕೊಳ್ಳುವುದಕ್ಕೆ ಹರ ಸಾಹಸ ಪಡಬೇಕಾದ ಪರಿಸ್ಥಿತಿ ಇತ್ತು. ಆದರೆ, ಈಗ ಹಾಗಿಲ್ಲ. ಕ್ಷಣಾರ್ಧದಲ್ಲಿ ಯಾವುದೇ ರೀತಿಯ ಕುಂದುಕೊರತೆಗಳನ್ನು ಸರ್ಕಾರದ ಬಳಿ ಹೇಳಿಕೊಳ್ಳಬಹುದು.



ಕರ್ನಾಟಕ ಸರ್ಕಾರದ ಪ್ರಜಾಸೇವಾ ಅಭಿಯಾನ ಎನ್ನುವುದು ಸಾರ್ವಜನಿಕರ ಕುಂದುಕೊರತೆಗಳನ್ನು ನೇರವಾಗಿ ಆಲಿಸಿ, ಸ್ಥಳದಲ್ಲೇ ಅಥವಾ ನಿರ್ದಿಷ್ಟ ಅವಧಿಯಲ್ಲಿ ಪರಿಹಾರ ಒದಗಿಸುವ ಏಕೀಕೃತ ವ್ಯವಸ್ಥೆಯಾಗಲಿದೆ. ಸೆಪ್ಟೆಂಬರ್ 5 ರಂದು ಈ ಅಭಿಯಾನ ವಿಜಯನಗರ ಜಿಲ್ಲೆಯ ಕೂಡ್ಲಿಗಿ ಹೋಬಳಿಯಿಂದ ಪ್ರಾರಂಭವಾಗಲಿದೆ. ಸಾರ್ವಜನಿಕರು ತಮ್ಮ ಸಣ್ಣಪುಟ್ಟ ಸಮಸ್ಯೆಗಳಿಗಾಗಿ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸುವುದು. ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಿ ಕಾಲಮಿತಿಯಲ್ಲಿ ವಿಲೇವಾರಿ ಮಾಡುವುದು. ಪಾರದರ್ಶಕತೆ: ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಹೆಚ್ಚಿಸುವುದು. ಜನರ ಮನೆ ಬಾಗಿಲಿಗೆ ಆಡಳಿತ ವ್ಯವಸ್ಥೆ ಯನ್ನು ಕಲ್ಪಿಸುವುದು ಹೊಸದಾಗಿ ರಚಿಸಿದ ಪ್ರಜಾಸೇವಾ ಇಲಾಖೆಯ ಉದ್ದೇಶವಾಗಿದೆ. ಪ್ರತಿ ಶನಿವಾರ ತಾಲ್ಲೂಕು/ಹೋಬಳಿ ಮಟ್ಟದ ಪ್ರಜಾಸೇವಾ ಅಭಿಯಾನ ಸಭೆಗಳನ್ನು ಪರ್ಯಾಯವಾಗಿ ರಾಜ್ಯಾದ್ಯಂತ ನಡೆಸಲು ಕ್ರಮ ವಹಿಸಲಾಗಿರುತ್ತದೆ. ಪ್ರತಿ ತಿಂಗಳ ಮೊದಲ ಮತ್ತು ಮೂರನೇ ಶನಿವಾರದಂದು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಕೇಂದ್ರದಲ್ಲಿ ಸಭೆ ನಡೆಯುತ್ತದೆ. ಎರಡನೇ ಮತ್ತು ನಾಲ್ಕನೇ ಶನಿವಾರದಂದು ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ತಾಲ್ಲೂಕು/ ಹೋಬಳಿ ಮಟ್ಟದಲ್ಲಿ ಸಭೆಯನ್ನು ಆಯೋಜಿಸುವುದು ಇದರ ಉದ್ದೇಶವಾಗಿದೆ. 3-4 ತಿಂಗಳಲ್ಲಿ ಎಲ್ಲಾ ತಾಲ್ಲೂಕು/ಹೋಬಳಿ ಮಟ್ಟದ ಸಭೆಗಳನ್ನು ಏರ್ಪಡಿಸಲು ಏಕೀಕೃತ ಕ್ಯಾಲೆಂಡರ್ ಇವೆಂಟ್ಸ್ ಅನ್ನು ತಯಾರು ಮಾಡಲಾಗಿರುತ್ತದೆ.

ಯಾವುದೇ ಕ್ಷೇತ್ರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಸಭೆ ನಡೆಯುವ ಸಂದರ್ಭದಲ್ಲಿ ಅದೇ ದಿನ ಆ ಕ್ಷೇತ್ರದಲ್ಲಿ ಪ್ರತ್ಯೇಕ ಹೋಬಳಿ ಮಟ್ಟದ ಶಾಸಕರ ಸಭೆಯನ್ನು ನಡೆಸಲಾಗುವುದಿಲ್ಲ. ಬದಲಾಗಿ, ಸಂಬಂಧಿಸಿದ ಶಾಸಕರು ಜಿಲ್ಲಾ ಉಸ್ತುವಾರಿ ಸಚಿವರ ಸಭೆಯಲ್ಲಿ ಭಾಗವಹಿಸುತ್ತಾರೆ. ಜಿಲ್ಲಾ ಮಟ್ಟದ ಅಧಿಕಾರಿಗಳು ಜಿಲ್ಲಾ ಉಸ್ತುವಾರಿ ಸಚಿವರ ಸಭೆಗಳಿಗೆ ಸಂಬಂಧಿಸಿದ ತಾಲ್ಲೂಕು ಅಧಿಕಾರಿಗಳೊಂದಿಗೆ ಹಾಜರಾಗುತ್ತಾರೆ. ಅದೇ ರೀತಿ ತಾಲ್ಲೂಕು ಮಟ್ಟದ ಅಧಿಕಾರಿಗಳು ತಮ್ಮ ತಾಲ್ಲೂಕು ಒಳಪಡುವ ಕ್ಷೇತ್ರದಲ್ಲಿ ನಡೆಯುವ ಶಾಸಕರ ಸಭೆಗಳಲ್ಲಿ ಭಾಗವಹಿಸುತ್ತಾರೆ. ಎಲ್ಲಾ ಸಭೆಗಳಲ್ಲಿ ಸ್ಥಳೀಯ ಮಾಜಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಅಥವಾ ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರು ಹಾಗೂ ಮುಖಂಡ-ರಿಗೂ ಆಹ್ವಾನಿಸಲಾಗುತ್ತದೆ.

ಸಾರ್ವಜನಿಕರಿಗೆ ಮುಂಗಡ ಮಾಹಿತಿ ಹಾಗೂ ಅರ್ಜಿ ಸಲ್ಲಿಕೆ ವ್ಯವಸ್ಥೆ: ಪ್ರಜಾಸೇವಾ ಅಭಿಯಾನದಡಿ ಸಭೆಗಳ ಕುರಿತು ಸಾರ್ವಜನಿಕರಿಗೆ ಕನಿಷ್ಠ 15 ದಿನಗಳ ಮುಂಚಿತವಾಗಿ ಮನೆ-ಮನೆಗೆ ಕರಪತ್ರಗಳನ್ನು ವಿತರಿಸಿ ಮಾಹಿತಿ ನೀಡಲಾಗುತ್ತದೆ. ಈ ಕರಪತ್ರಗಳಲ್ಲಿ ಪೂರ್ವಮುದ್ರಿತ ಅರ್ಜಿ ನಮೂನೆ ಹಾಗೂ ಅಗತ್ಯ ದಾಖಲೆಗಳ ಪರಿಶೀಲನಾ ಪಟ್ಟಿಯನ್ನು ಒಳಗೊಂಡಿರುತ್ತದೆ. ಅಲ್ಲದೆ, ತಾಲ್ಲೂಕು ಅಥ-ವಾ ಹೋಬಳಿ ವ್ಯಾಪ್ತಿಯ ನಿವಾಸಿಗಳಿಗೆ ಸಭೆಯ ದಿನಾಂಕ, ಸಮಯ, ಸ್ಥಳ ಹಾಗೂ ಅಧ್ಯಕ್ಷತೆ ವಹಿಸುವ ಜನಪ್ರತಿನಿಧಿಯ ವಿವರಗಳನ್ನು ತಿಳಿಸಲು ಕೃತಕ ಬುದ್ಧಿಮತ್ತೆ ಆಧಾರಿತ ಕಾಲ್ ಸೆಂಟರ್ ಮೂಲಕ ಹೊರಹೋಗುವ ಕರೆಗಳನ್ನು ಮಾಡಲಾಗುತ್ತದೆ. ಸಾರ್ವಜನಿಕರು ತಮ್ಮ ಅರ್ಜಿಗಳು ಹಾಗೂ ಅಹವಾಲುಗಳನ್ನು ಮುಂಚಿತವಾಗಿ ಗ್ರಾಮ ಒನ್ ಕೇಂದ್ರದಲ್ಲಿಯೇ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ. ಪ್ರತಿ ಪ್ರಜಾಸೇವಾ ಅಭಿಯಾನ ಸಭೆಯ ಸ್ಥಳದಲ್ಲಿ ಗ್ರಾಮ ಒನ್ ಮಳಿಗೆಗಳನ್ನು ಸ್ಥಾಪಿಸಿ, ಕಂಪ್ಯೂಟ-ರ್ ಲ್ಯಾಪ್‌ಟಾಪ್, ಪ್ರಿಂಟರ್ ಹಾಗೂ ಇಂಟರ್ನೆಟ್ ಸೌಲಭ್ಯಗಳ ಸಾರ್ವಜನಿಕರಿಗೆ ನೇರವಾಗಿ ಆನ್‌ಲೈನ್‌ನಲ್ಲಿ ಅರ್ಜಿ ಹಾಗೂ ಅಹವಾಲುಗಳನ್ನು ಸಲ್ಲಿಸಲು ವ್ಯವಸ್ಥೆ ಮಾಡಲಾಗುತ್ತದೆ.

ಪ್ರಜಾಸೇವಾ ಅಭಿಯಾನ ಸಭೆಯ ದಿನದಂದು ಅಹವಾಲುಗಳನ್ನು ಎರಡು ಪ್ರತ್ಯೇಕ ಸರತಿಗಳಲ್ಲಿ ನಿರ್ವಹಿಸಲಾಗುತ್ತದೆ. ಮೊದಲನೆಯದು ಹೊಸ ಅಹವಾಲುಗಳ ಸರತಿ. ಇದರಲ್ಲಿ ಸಾರ್ವಜನಿಕರು ಮೊದಲ ಬಾರಿಗೆ ನೋಂದಾಯಿಸುವ ಅಹವಾಲುಗಳನ್ನು ದಾಖಲಿಸಲಾಗುತ್ತದೆ. ಎರಡನೆಯದು ಪರಿಹಾರವಾಗದ ಅಥವಾ ಅಸಮಾಧಾನಕರವಾಗಿ ಪರಿಹರಿಸಲಾದ ಅಹವಾಲುಗಳ ಸರತಿ. ಈಗಾಗಲೇ ಸಕಾಲ ಅಥ-ವಾ ಏಕೀಕೃತ ದೂರು ನಿವಾರಣೆ ತಂತ್ರಾಂಶದಲ್ಲಿ ನೋಂದಾಯಿಸಲಾಗಿದ್ದರೂ ಯಾವುದೇ ಪ್ರತಿಕ್ರಿಯೆ ದೊರೆಯದ ಅಥವಾ 21 ದಿನಗಳ ನಂತರವೂ ಸಮರ್ಪಕ ಪರಿಹಾರ ದೊರೆಯದ ಅಹವಾಲುಗಳನ್ನು ಈ ಸರತಿಯಲ್ಲಿ ಪರಿಗಣಿಸಲಾಗುತ್ತದೆ.

ಈ ಸರತಿಯನ್ನು ಬಳಸಲು ಸಾರ್ವಜನಿಕರು ತಮ್ಮ ಸಕಾಲ, ಸಿಎಸ್ ಸಿ ಅಥವಾ ಪಿಜಿಆರ್ ಎಸ್ ಸಂಖ್ಯೆಯನ್ನು ನೀಡಬೇಕಾಗುತ್ತದೆ. ಸಮಯದ ಅಭಾವವಿದ್ದಲ್ಲಿ ಇಂತಹ ಅಹವಾಲುದಾರರಿಗೆ ಸಭೆಯ ಅಧ್ಯಕ್ಷತೆ ವಹಿಸುವ ಜನಪ್ರತಿನಿಧಿಯೊಂದಿಗೆ ನೇರವಾಗಿ ಸಂವಹನ ನಡೆಸಲು ಆದ-ೃತೆ ನೀಡಲಾಗುತ್ತದೆ. ಸ್ಥಳದಲ್ಲಿಯೇ ಸೇವೆ ಹಾಗೂ ಅಹವಾಲುಗಳ ಪರಿಹಾರ: ಪ್ರಜಾಸೇವಾ ಅಭಿಯಾನ ಸಭೆಯ ಸಂದರ್ಭದಲ್ಲಿ ಅರ್ಹತೆ ಹೊಂದಿರುವ ಯೋಜನಾ ಫಲಾನುಭವಿಗಳಿಗೆ ಮಂಜೂರಾತಿ ಪತ್ರವನ್ನು ಸ್ಥಳದಲ್ಲಿಯೇ ವಿತರಿಸಬಹುದಾಗಿದೆ. ಅದೇ ರೀತಿ ಈಗಾಗಲೇ ಪರಿಹರಿಸಲಾದ ಅಹವಾಲುಗಳಿಗೆ ಸಂಬಂಧಿಸಿದಂತೆ ಪರಿಹಾರದ ಸೂಕ್ತ ಅನುಮೋದನೆ/ ದೃಢೀಕರಣ ಪತ್ರವನ್ನು ಸ್ಥಳದಲ್ಲಿಯೇ ನೀಡಲಾಗುತ್ತದೆ. ಅರ್ಜಿಗಳು ಹಾಗೂ ಅಹವಾಲುಗಳ ಪ್ರಗತಿಯನ್ನು ಸಾರ್ವಜನಿಕರು ತಿಳಿದುಕೊಳ್ಳಲು ನೈಜ-ಸಮಯದ ಸ್ಥಿತಿ ಪರಿಶೀಲನಾ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ. ಇದರ ಮೂಲಕ ಅರ್ಜಿದಾರರು ತಮ್ಮ ಅರ್ಜಿ ಅಥ-ವಾ ಅಹವಾಲಿನ ಪ್ರಗತಿಯನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

**ಜನ ಜಾಗೃತಿಯಿಂದ ಜನರ ಸಹಭಾ ತ್ವ ಹಾಗೂ ಪಾರದರ್ಶಕತೆ:**

ಪ್ರತಿ ಸಭಾ ಸ್ಥಳದಲ್ಲಿ ವಿವಿಧ ಇಲಾಖೆಗಳ ಮಳಿಗೆಗಳನ್ನು ಸ್ಥಾಪಿಸಿ, ಸಂಬಂಧಿಸಿದ ಸರ್ಕಾರಿ ಯೋಜನೆಗಳ ಅರ್ಹತಾ ಮಾನದಂಡಗಳು ಹಾಗೂ ಅರ್ಜಿ ಸಲ್ಲಿಸುವ ವಿಧಾನವನ್ನು ಇಲಾಖಾವಾರು, ಸಾರ್ವಜನಿಕರಿಗೆ ತಿಳಿಸಲಾಗುತ್ತದೆ. ಇದರ ಜೊತೆಗೆ, ಉತ್ತಮ ಕಾರ್ಯಪದ್ಧತಿ ಪ್ರದರ್ಶನ ವನ್ನು ಆಯೋಜಿಸಲಾಗುತ್ತದೆ. ಸಭೆಯಲ್ಲಿ ಭಾಗವಹಿಸುವ ಸಾರ್ವಜನಿಕರಿಗೆ ಕುಡಿಯುವ ನೀರು ಹಾಗೂ ಮೂಲಭೂತ ವೈದ್ಯಕೀಯ ಸೌಲಭ್ಯಗಳನ್ನು ಸಹ ಒದಗಿಸಲಾಗುತ್ತದೆ. ಪ್ರತಿ ಪ್ರಜಾಸೇವಾ ಅಭಿಯಾನ ಸಭೆಯ ನಂತರ ಸಭೆಯ ಸಂಪೂರ್ಣ ವಿವರಗಳನ್ನು ಪೋರ್ಟಲ್‌ನಲ್ಲಿ ದಾಖಲಿಸಲಾಗುತ್ತದೆ. ಏಕೀಕೃತ ವ್ಯವಸ್ಥೆ: ಕರ್ನಾಟಕ ರಾಜ್ಯದ ವಿವಿಧ ಇಲಾಖೆಗಳ ಸೇವೆಗಳಿಗೆ ಮತ್ತು ಯೋಜನೆಗಳಿಗೆ ಸಂಬಂಧಿಸಿದ ಸಾರ್ವಜನಿಕ ಕುಂದುಕೊರತೆಗಳ/ ದೂರುಗಳ ನಿವಾರಣೆಗಾಗಿ ನಾಗರೀಕರು ಅಲೆದಾಡದೆ ಇರಲು, ಕರ್ನಾಟಕ ಸರ್ಕಾರವು, ಪ್ರಜಾಸೇವೆ ಇಲಾಖೆಯಡಿಯಲ್ಲಿ ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ ಎಂಬ ಬಹು-ಮುಖಿಯಾದ, ದತ್ತಾಂಶ ಆಧಾರಿತ ಮತ್ತು ಕಾಗದರಹಿತ ತಂತ್ರಾಂಶ ವ್ಯವಸ್ಥೆಯನ್ನು ರೂಪಿಸಿದೆ. ನಾಗರೀಕರು ಸಹಾಯವಾಣಿ ಸಂಖ್ಯೆ : 1902 ಅಥವಾ https://ipgrs.karnataka.gov.in ಮೂಲಕ ಕುಂದುಕೊರತೆಗಳನ್ನು ದಾಖಲಿಸಬಹುದು. ಅಲ್ಲದೆ, ನಾಗರೀಕರಿಂದ ಕುಂದುಕೊರತೆಗಳನ್ನು / ದೂರುಗಳನ್ನು ಕೃತಕ ಬುದ್ಧಿ ಮತ್ತೆ(AI) ತಂತ್ರಜ್ಞಾನ ವನ್ನು ಉಪಯೋಗಿಸಿ ಮೂರು ಹಂತದ ದೂರು ನಿವಾರಣಾ ವ್ಯವಸ್ಥೆಯ ಮೂಲಕ ಸಾರ್ವಜನಿಕ ಸಮಸ್ಯೆಗೆ ಪರಿಹಾರ ನೀಡಲಾಗುತ್ತಿದೆ. ಪ್ರತಿ ಬುಧವಾರದ ಮೂರು ಹಂತದ ಪರಿಶೀಲನಾ ವ್ಯವಸ್ಥೆ: ಪ್ರಜಾಸೇವಾ ಅಭಿಯಾನ ಸಭೆಗಳಲ್ಲಿ ಸ್ವೀಕರಿಸಲಾದ ಎಲ್ಲಾ ಅರ್ಜಿಗಳು ಮತ್ತು ಅಹವಾಲುಗಳನ್ನು ಒಂದೇ ಸಾಮಾನ್ಯ ವಾರದಲ್ಲಿ ವ್ಯವಸ್ಥಿತವಾಗಿ ಪರಿಶೀಲಿಸಲಾಗುತ್ತದೆ.

ಈ ಪರಿಶೀಲನೆಯನ್ನು ಪ್ರತಿ ಬುಧವಾರ ಮೂರು ಹಂತಗಳಲ್ಲಿ ನಡೆಸಲಾಗುತ್ತದೆ. ನಡೆಸಲಾಗುತ್ತದೆ. ಬೆಳಿಗ್ಗೆ 9 ಗಂಟೆಯಿಂದ 11 ಗಂಟೆಯ ವರೆಗೆ ತಾಲ್ಲೂಕು ಮಟ್ಟದ ಪರಿಶೀಲನೆ: ತಹಶೀಲ್ದಾರ್ ಹಾಗೂ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಹಂತದಲ್ಲಿ ಸ್ವೀಕರಿಸಿದ ಅರ್ಜಿಗಳು ಮತ್ತು ಅಹವಾಲುಗಳ ಸ್ಥಿತಿಯನ್ನು ತಮ್ಮ ಅಧಿಕಾರಿಗಳೊಂದಿಗೆ ತಂತ್ರಾಂಶಗಳನ್ನು ಬಳಸಿ ಅವರ ಹಂತದಲ್ಲಿ ನಿವಾರಣೆ ಆಗದೆ ಇರುವ ಅರ್ಜಿಗಳನ್ನು ಉಪವಿಭಾಗಾಧಿಕಾ-ರಿಗಳಿಗೆ ಇ-ಕಛೇರಿ ಮೂಲಕ ಮಂಡಿಸುತ್ತಾರೆ. ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯ ವರೆಗೆ ಉಪವಿಭಾಗ ಮಟ್ಟದ ಪರಿಶೀಲನೆ ನಡೆಸಲಾಗುತ್ತದೆ: ಉಪವಿಭಾಗದ ಸಹಾಯಕ ಆಯುಕ್ತರು ತಾಲ್ಲೂಕು ಮಟ್ಟದಿಂದ ಬಂದ ಮಾಹಿತಿಯನ್ನು ಕ್ರೋಢೀಕರಿಸಿ ಪರಿಶೀಲಿಸುತ್ತಾರೆ. ತಮ್ಮ ಹಂತದಲ್ಲಿ ನಿವಾರಣೆ ಆಗದೆ ಇರುವ ವಿಷಯ/ ಅರ್ಜಿಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸುತ್ತಾರೆ. ಮಧ್ಯಾಹ್ನ 3 ಗಂಟೆಯಿಂದ ಸಂಜೆ 5 ಗಂಟೆಯವರೆಗೆ **ಜಿಲ್ಲಾ ಮಟ್ಟದ ಪರಿಶೀಲನೆ ನಡೆಯಲಾಗುತ್ತದೆ:**

ಜಿಲ್ಲಾಧಿಕಾರಿಗಳು ಉಪವಿಭಾಗ ಮಟ್ಟದಿಂದ ಬಂದ ಮಾಹಿತಿಯನ್ನು ಕ್ರೋಢೀಕರಿಸಿ ಜಿಲ್ಲಾ ಮಟ್ಟದಲ್ಲಿ ಪರಿಶೀಲಿಸುತ್ತಾರೆ. ಜಿಲ್ಲಾಧಿಕಾ-ರಿಗಳು ಅಗತ್ಯವಿದ್ದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಖುದ್ದಾಗಿ ಹಾಜರಾಗುವಂತೆ ಸೂಚಿಸಬಹುದು. ಉಪವಿಭಾಗ ಹಾಗೂ ತಾಲ್ಲೂಕು ಮಟ್ಟದ ಅಧಿಕಾ-ರಿಗಳಿಗೆ ವೀಡಿಯೋ ಅಥವಾ ಆಡಿಯೋ ಕಾನ್ಸರೆನ್ಸ್ ಮೂಲಕ ಭಾಗವಹಿಸಲು ಅವಕಾಶ ನೀಡಬಹುದು. ಪ್ರತಿ ಹಂತದಲ್ಲಿಯೂ ಪರಿಹಾರದ ಬಗ್ಗೆ ಅಸಮಾಧಾನ ಹೊಂದಿರುವ ಸಾರ್ವಜನಿಕರು ಸಂಬಂಧಿಸಿದ ಅಧಿಕಾರಿಯ ಮುಂದೆ ಖುದ್ದಾಗಿ ಹಾಜರಾಗಿ ತಮ್ಮ ಅಹವಾಲನ್ನು ಮಂಡಿಸಲು ಅವಕಾಶವಿರುತ್ತದೆ. ಈ ವ್ಯವಸ್ಥೆಯು ಈಗಾಗಲೇ ಜಾರಿಯಲ್ಲಿರುವ ವಾರದ ಜಿಲ್ಲಾಧಿಕಾರಿ ಮಟ್ಟದ ಪರಿಶೀಲನಾ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶ ಹೊಂದಿದ್ದು, ಅದಕ್ಕೆ ಯಾವುದೇ ರೀತಿಯ ವಿರುದ್ಧತೆಯನ್ನು ಉಂಟುಮಾಡದೆ, ಒಂದೇ ದಿನದಲ್ಲಿ ಕ್ರಮವಾಗಿ ಮೂರು ಹಂತಗಳ ಪರಿಶೀಲನಾ ಸಭೆಗಳನ್ನು ನಡೆಸುವ ವ್ಯವಸ್ಥೆಯನ್ನು ರೂಪಿಸುತ್ತದೆ. ಆದುದರಿಂದ ಶನಿವಾರ ಹಾಗೂ ಬುಧವಾರ ರಾಜ್ಯ/ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ ಬೇರೆ ಯಾವ ಸಭೆಯನ್ನು ನಡೆಸಲು ನಿಷೇಧಿಸಲಾಗಿದೆ. ಮೇಲ್ಮನವಿ, ಹೊಣೆಗಾರಿಕೆ ಹಾಗೂ ವರದಿ ಸಲ್ಲಿಕೆ: ನಿಗದಿತ ಅವಧಿಯೊಳಗೆ ವಿಲೇವಾರಿಯಾಗದ ಅರ್ಜಿಗಳು ಮತ್ತು ಅಹವಾಲುಗಳನ್ನು ಸಂಬಂಧಿಸಿದ ಇಲಾಖೆಯ ಮುಖ್ಯಸ್ಥರಿಗೆ ಸ್ವಯಂಚಾಲಿತವಾಗಿ ಮೇಲ್ದರ್ಜೆಗೆ ವರ್ಗಾಯಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತದೆ. ಈ ಮೂಲಕ ಬಾಕಿ ಉಳಿದಿರುವ ಅರ್ಜಿಗಳು ಮತ್ತು ಅಹವಾಲುಗಳ ಬಗ್ಗೆ ಸಂಬಂಧಿಸಿದ ಇಲಾಖೆಯ ಉನ್ನತ ಮಟ್ಟದಲ್ಲಿ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ. ಪ್ರತಿ ಜಿಲ್ಲೆಗೆ ಒಬ್ಬ ಸರ್ಕಾರದ ಕಾರ್ಯದರ್ಶಿಯವರನ್ನು ಜಿಲ್ಲಾಉಸ್ತುವಾರಿ ಕಾರ್ಯದರ್ಶಿ ಆಗಿ ನೇಮಿಸಲಾಗಿದೆ. ಅವರು ಪ್ರತಿ ಮೊದಲ ನೇ ಹಾಗೂ ಮೂರನೇ ಶುಕ್ರವಾರ ಜಿಲ್ಲೆಗೆ ಭೇಟಿ ನೀಡಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಶನಿವಾರ ದಿನ ನಡೆಯುವ ಸಭೆಗೆ ಪೂರ್ವಭಾವಿ ಸಿದ್ಧತೆ ಹಾಗೂ ಮೇಲ್ವಿಚಾರಣೆ ಮಾಡತಕ್ಕದ್ದು. ಜಿಲ್ಲಾ ಮಟ್ಟದಲ್ಲಿ ನಿವಾರಣೆ ಆಗದೆ ಇರುವ ವಿಷಯಗಳನ್ನು ರಾಜ್ಯ ಮಟ್ಟದ ಸಹೋದ್ಯೋಗಿಗಳಾದ ಇತರ ಇಲಾಖೆ ಕಾರ್ಯದರ್ಶಿಗಳೊಂದಿಗೆ ಪರಾಮರ್ಶಿಸಿ ಹಾಗೂ ಅಹವಾಲುಗಳನ್ನು ಇ-ಕಛೇರಿ ಮೂಲಕ ಅವ-ರಿಗೆ ತಲುಪಿಸಿ ಸಮಸ್ಯೆಗಳನ್ನು ಬಗೆಹರಿಸತಕ್ಕದ್ದು. ಇದಕ್ಕಾಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪೋರ್ಟಲ್ ಅನ್ನು ಸ್ಥಾಪಿಸಲಾಗಿದೆ. ಇದನ್ನು ಮುಖ್ಯ ಕಾರ್ಯದರ್ಶಿಯವರು ಪ್ರತಿ ತಿಂಗಳು ನಡೆಯುವ ಎಲ್ಲಾ ಕಾರ್ಯದರ್ಶಿಗಳ ಸಭೆಯಲ್ಲಿ ಪರಿಶೀಲಿಸುತ್ತಾರೆ. ಅಲ್ಲದೆ, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಪರಿಶೀಲನಾ ಸಭೆಯಲ್ಲಿ ಜಿಲ್ಲೆಗಳಲ್ಲಿ ಬಾಕಿ ಉಳಿದಿರುವ ಅರ್ಜಿಗಳು ಮತ್ತು ಅಹವಾಲುಗಳ ವಿಲೇವಾರಿಯ ಪ್ರಗತಿಯನ್ನು ಅವಲೋಕಿಸಲಾಗುತ್ತದೆ. ಮಾತ್ರವಲ್ಲ, ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿ ಜಿಲ್ಲೆ/ ಹೋಬಳಿ /ತಾಲ್ಲೂಕು/ಇಲಾಖೆವಾರು ಬಾಕಿ ಇರುವ ಸಮಸ್ಯೆ ಗಳನ್ನು ಚರ್ಚಿಸಿ ನೀತಿ ಅಥವಾ ಯೋಜನೆಗಳ ಪರಿಷ್ಕರಣೆ ಬಗ್ಗೆ ಅಗತ್ಯ ವಿಮರ್ಶೆಗಳನ್ನು ನಡೆಸುತ್ತಾರೆ. ಒಟ್ಟಾರೆಯಾಗಿ, ಮುಖ್ಯಮಂತ್ರಿಗಳ ನೇತೃತ್ವ ಹಾಗೂ ನಿರ್ದೇಶನದಂತೆ ಪ್ರಜಾಸೇವಾ ಅಭಿಯಾನ ಸಭೆಗಳ ಉದ್ದೇಶವು ಸಾರ್ವಜನಿಕರ ಹತ್ತಿರ ಇಡೀ ಆಡಳಿತ ತಂತ್ರವನ್ನು ವಿಕೇಂದ್ರೀಕರಿಸಿ, ಪ್ರಜಾಪ್ರಭುತ್ವವನ್ನು ಸಂವಿಧಾನದ ಆಶಯದಂತೆ ಜನಪರ ಸರ್ಕಾರ ನಡೆಸಲು ಒಂದು ವಿನೂತನ ಪ್ರಯಾಸವಾಗಿದೆ.

ಈ ಮೂಲಕ ಅಹವಾಲುಗಳನ್ನು ನೇರವಾಗಿ ಆಲಿಸುವುದರ ಜೊತೆಗೆ, ಅರ್ಜಿಗಳ ತ್ವ-ರಿತ ವಿಲೇವಾರಿ, ಸ್ಥಳದಲ್ಲಿಯೇ ಸೇವೆ ಒದಗಿಸುವಿಕೆ, ಅಹವಾಲುಗಳ ನಿರಂತರ ಪರಿಶೀಲನೆ, ಅಧಿಕಾರಿಗಳ ಹೊಣೆಗಾರಿಕೆ ಮತ್ತು ನಾಗರಿಕರಿಗೆ ಪಾರದರ್ಶಕ ವರದಿ ನೀಡುವ ವ್ಯವಸ್ಥೆಯನ್ನು ಖಚಿತಪಡಿಸುವುದಾಗಿದೆ. ಆದುದರಿಂದ, ಜನರಿಂದ, ಜನರಿಗಾಗಿ, ಜನರಿಗೋಸ್ಕರ ರೂಪಿಸಿರುವ ಸರ್ಕಾರದ ಈ ಮಹತ್ವಾಕಾಂಕ್ಷೆಯ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಾರ್ವಜನಿಕರು ತಮ್ಮ ಕುಂದು ಕೊರತೆಗಳನ್ನು ಪರಿಹ-ರಿಸಿಕೊಳ್ಳಲು ಈ ವೇದಿಕೆಯ ಸದುಪಯೋಗವನ್ನು ಪಡೆಯುತ್ತೀರೆಂದು ಆಶಿಸುತ್ತೇನೆ !! ಮಾತ್ರವಲ್ಲ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ತಿಳುವಳಿಕೆ ಪಡೆಯಲು ಹಾಗೂ ಸರ್ಕಾರಕ್ಕೆ ತಮ್ಮ ಸಲಹೆ ಸೂಚನೆ ನೀಡಲು ಇದು ಒಂದು ಅನುಭವ ಮಂಟಪವಾಗಿ ನಿರಂತರ ನಡೆಯುವ ಉಪಕ್ರಮವಾಗಲಿದೆ ಹಾಗೂ ಎಲ್ಲಾ ಲೋಕತಂತ್ರ ವ್ಯವಸ್ಥೆಗಳಿಗೆ ಮಾದರಿಯಾಗಿ ದಾ-ರಿದೀಪವಾಗುತ್ತದೆ ಎಂದು ನನ್ನ ವಿಶ್ವಾಸ.

**ಡಾ. ಶಾಲಿನಿ ರಜನೀಶ್ ಸರ್ಕಾರದ ಮುಖ್ಯ ಕಾರ್ಯದರ್ಶಿ**

# ಮದ್ಯಮುಕ್ತ ಗ್ರಾಮಗಳ ಸ್ಥಿರತೆಗೆ ಸಂಯಮ ಮಂಡಳಿ ಒತ್ತು ಗ್ರಾಮಗಳಿಗೆ ಭೇಟಿ ನೀಡಿ ವಾಸ್ತವ ಸ್ಥಿತಿಗತಿ ಪರಿಶೀಲಿಸಿದ ಕಾರ್ಯದರ್ಶಿ ರೂಪಾ

ಕುಷ್ಟಗಿ: ಮದ್ಯಮುಕ್ತ ಗ್ರಾಮಗಳ ಸ್ಥಿರತೆ ಹಾಗೂ ಅಲ್ಲಿನ ವಾಸ್ತವ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವ ಉದ್ದೇಶದಿಂದ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ನೂತನ ಕಾರ್ಯದರ್ಶಿ ರೂಪಾ ಅವರು ಭಾನುವಾರ ಕೊಪ್ಪಳ ಹಾಗೂ ಕುಷ್ಟಗಿ ತಾಲೂಕಿನ ವಿವಿಧ ಮದ್ಯಮುಕ್ತ ಗ್ರಾಮಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು.

ಇತ್ತೀಚೆಗೆ ಕೊಪ್ಪಳ ತಾಲೂಕಿನ ಲೇಬಗೇರಿ ಸಮೀಪದ ಹಟ್ಟಿ ಗ್ರಾಮದಲ್ಲಿ ರಾಜ್ಯ ಮದ್ಯಪಾನ ಸಂಯಮ ಮಂಡಳಿ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮದ್ಯಮುಕ್ತ ಗ್ರಾಮಗಳಿಗೆ ಪ್ರೋತ್ಸಾಹ ಹಾಗೂ ಸಂಯಮ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಕಾರ್ಯದರ್ಶಿ ರೂಪಾ ಅವರು ಮದ್ಯಮುಕ್ತ ಗ್ರಾಮಗಳಿಗೆ ಖುದ್ದಾಗಿ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿದರು. ಕುಷ್ಟಗಿ ತಾಲೂಕಿನ ನಾಗರಾಳ, ಹಿರೇಬನ್ನಿಗೋಳ, ಕೆ. ಬೋದೂರು ತಾಂಡಾ ಹಾಗೂ ಮಾಳ



ಗ್ರಾಮಗಳಿಗೆ ಭೇಟಿ ನೀಡಿದ ಅವರು, ಗ್ರಾಮಸ್ಥರೊಂದಿಗೆ ಸಂವಾದ ನಡೆಸಿ ಮದ್ಯಮುಕ್ತ ಗ್ರಾಮಗಳ ಸ್ಥಿರತೆ, ಎದುರಾಗುತ್ತಿರುವ ಸಮಸ್ಯೆಗಳು ಹಾಗೂ ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಿದರು. ಗ್ರಾಮಸ್ಥರಿಂದ ಹಲವು ಸಲಹೆ ಹಾಗೂ ಮಾರ್ಗದರ್ಶನಗಳನ್ನು ಪಡೆದುಕೊಂಡರು. ಮದ್ಯಮುಕ್ತ ಗ್ರಾಮಗಳಿಗೆ ವಿಶೇಷ ಆದ್ಯತೆ ನೀಡಿ ಗ್ರಾಮಗಳಿಗೆ ಖುದ್ದಾಗಿ ಭೇಟಿ ನೀಡಿ ಜನರೊಂದಿಗೆ ಸಂವಾದ ನಡೆಸಿದ ಕಾರ್ಯದರ್ಶಿ ರೂಪಾ ಅವರ ಕ್ರಮಕ್ಕೆ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದರು.

ಭೇಟಿ ನೀಡಿದ ಎಲ್ಲ ಗ್ರಾಮಗಳಲ್ಲಿಯೂ ಉತ್ತಮ ಸ್ಪಂದನೆ ದೊರೆತಿದ್ದು, ಮದ್ಯಮುಕ್ತ ವಾತಾವರಣವನ್ನು ಮುಂದುವರಿಸುವ ಕು-ರಿತು ಗ್ರಾಮಸ್ಥರು ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಿದರು. ಗ್ರಾಮಸ್ಥರು ಮಾತನಾಡಿ, "ನಮ್ಮ ಗ್ರಾಮಗಳಲ್ಲಿ ಮದ್ಯ ಸಂಪೂರ್ಣವಾಗಿ ನಿರ್ಮೂಲನೆಯಾಗಬೇಕು. ಗ್ರಾಮದಲ್ಲಿ ಯಾವುದೇ ರೀತಿಯ ಮದ್ಯ ಲಭ್ಯವಾಗಬಾರದು ಎಂಬುದು ನಮ್ಮೆಲ್ಲರ ಕಳಕಳಿಯಾಗಿದೆ. ಮದ್ಯಮುಕ್ತ ಗ್ರಾಮಗಳ ಆಶಯವನ್ನು ಮತ್ತಷ್ಟು ಬಲಪಡಿಸಲು ಸರ್ಕಾರ ಹಾಗೂ ಸಂಯಮ ಮಂಡಳಿ ಅಗತ್ಯ ಸಹಕಾರ ನೀಡಬೇಕು" ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಗಾಂಧಿ ಬಳಗದ ಸದಸ್ಯರಾದ ಶಿವಪ್ಪ ಜೋಗಿ, ಮಲ್ಲಪ್ಪ ಹವಳಿ, ಗುರುರಾಜ, ಶಿವಪ್ಪ ಹಡಪದ, ಭೀಮಪ್ಪ ಹೂಗಾರ, ಯುವರಾಜ ಬಡಿಗೇರ, ಸಾವಿತ್ರಿ ಎಂ. ಪ್ರಾಣೇಶ್ ಹಾಗೂ ಕುಷ್ಟಗಿ ಉಸ್ತುವಾರಿ ಮಾರುತಿ ಪೂಜಾರಿ ಉಪಸ್ಥಿತರಿದ್ದು, ಗ್ರಾಮಗಳಿಗೆ ಭೇಟಿ ನೀಡುವ ಸಂದರ್ಭದಲ್ಲಿ ಸಹಕಾರ ನೀಡಿದರು.

# ಇಂದು ಸೇವೆಯಿಂದ ನಿವೃತ್ತರಾಗಲಿದ್ದಾರೆ ಐಜಿಪಿ ಡಾ.ಬಿ.ಆರ್. ರವಿಕಾಂತೇಗೌಡ

ಬೆಂಗಳೂರು: ಪೂರ್ವ ವಲಯದ ಐಜಿಪಿ ಡಾ. ಬಿ.ಆರ್. ರವಿಕಾಂತೇಗೌಡ ಅವರು ಇಂದು ಪೊಲೀಸ್ ಸೇವೆಯಿಂದ ನಿವೃತ್ತಿಯಾಗಲಿದ್ದಾರೆ. ಮಂಡ್ಯ ಜಿಲ್ಲೆಯವರಾದ ರವಿಕಾಂತೇಗೌಡ ಅವರು 1997ರಲ್ಲಿ ಪೊಲೀಸ್ ಇಲಾಖೆಗೆ ಸೇರ್ಪಡೆಯಾಗಿ, ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ತರಬೇತಿ ಪಡೆದ ಬಳಿಕ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಡಿವೈಎಸ್‌ಪಿಯಾಗಿ ವೃತ್ತಿಜೀವನ ಆರಂಭಿಸಿದ್ದರು. ನಂತರ ನಂಜನಗೂಡು ಉಪವಿಭಾಗದಲ್ಲಿಯೂ



ಸೇವೆ ಸಲ್ಲಿಸಿದ್ದರು. ಹುಬ್ಬಳ್ಳಿ-ಧಾರವಾಡ ಹಾಗೂ ಮೈಸೂರು ನಗರದಲ್ಲಿ ಡಿಸಿಪಿಯಾಗಿ, ದಕ್ಷಿಣ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಎಸ್‌ಪಿಯಾಗಿ ಕರ್ತವ್ಯ ನಿರ್ವಹಿಸಿದ್ದರು. ಬೆಂಗಳೂರು ನಗರದ ಮೂರು ವಿಭಾಗಗಳಲ್ಲಿ ಡಿಸಿಪಿಯಾಗಿ ಸೇವೆ ಸಲ್ಲಿಸಿದ ಬಳಿಕ ಡಿಐಜಿಯಾಗಿ ಬಡ್ತಿ ಪಡೆದು, ಬೆಂಗಳೂರು ನಗರದ ಅಪರಾಧ ಮತ್ತು ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತರಾಗಿಯೂ ಕಾರ್ಯನಿರ್ವಹಿಸಿದ್ದರು. ಐಜಿಪಿಯಾಗಿ ಬಡ್ತಿ ಪಡೆದ ಬಳಿಕ ಪೊಲೀಸ್ ಪ್ರಧಾನ ಕಚೇರಿ ಹಾಗೂ ಕೇಂದ್ರ ವಲಯದಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ಪ್ರಸ್ತುತ ಪೂರ್ವ ವಲಯದ ಐಜಿಪಿಯಾಗಿ ಸೇವೆ ಸಲ್ಲಿಸುತ್ತಿದ್ದರು.

ಅತ್ಯುತ್ತಮ ಸೇವೆಯನ್ನು ಪರಿಗಣಿಸಿ ರವಿಕಾಂತೇಗೌಡ ಅವರಿಗೆ ಮುಖ್ಯಮಂತ್ರಿ ಪದಕ ಹಾಗೂ ರಾಷ್ಟ್ರಪತಿ ಪದಕ ನೀಡಿ ಗೌರವಿಸಲಾಗಿದೆ. ಇಂದು ದಾವಣಗೆರೆ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಏರ್ಪಡಿಸಿದ್ದ ಬೀಳ್ಕೊಡುಗೆ ಕವಾಯತಿನಲ್ಲಿ ವಂದನೆ ಸ್ವೀಕರಿಸಿದ ಬಳಿಕ ರವಿಕಾಂತೇಗೌಡ ಅವರು ಮಾತನಾಡಿದರು.

"JANASHREE TIMES" Kannada daily morning Owner, Published by ANANDAYYA DANAYYA VIRAKTAMATH Address: 229/1, 3 RD CROSS VIVEKANAND NAGAR NEAR WATER TANK, GADAG, KARNATAKA - 582101. Printed at: SHIVANI PRINTERS Printers. Address: AT: HULKOTI T/D: GADAG OFFICE ADDERS: SHIVANI PRINTERS NEW COURT OPPSITE PLOT NO 28 RS NO 312/3B GARAG COMPLEX, GADAG, KARNATAKA - 582101. email: janashreetimes@gmail.com